ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

ಶನಿವಾರ, ಡಿಸೆಂಬರ್ 02, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 200 RNI : 27369/75

janathavani@mac.com
www.janathavani.com
08192 254736 91642 99999

## ವಿದ್ಯುತ್ ಪರಿಸ್ಥಿತಿ ಸುಧಾರಿಸಲು ಅಣೆಕಟ್ಟು, ಕಟ್ಟಡಗಳ ಅಡಮಾನ

ಬೆಂಗಳೂರು, ಡಿ. 1 - ರಾಜ್ಯದಲ್ಲಿ ತಲೆದೋರಿರುವ ವಿದ್ಯುತ್ ಪರಿಸ್ಥಿತಿ ನಿಭಾಯಿಸಲು ಜಲ ವಿದ್ಯುತ್ ಉತ್ಪಾದನಾ ಅಣೆಕಟ್ಟೆ ಹಾಗೂ ಇಂಧನ ಇಲಾಖೆಯ ಪ್ರಮುಖ ಕಟ್ಟಡಗಳನ್ನು ಸರ್ಕಾರ ಅಡಮಾನ ಇಟ್ಟಿರುವುದು ಬೆಳಕಿಗೆ ಬಂದಿದೆ.

ಕರ್ನಾಟಕದ ಇತಿಹಾಸದಲ್ಲೇ ವಿದ್ಯುತ್ ಬಳಕೆ ಪ್ರಮಾಣ ದ್ವಿಗುಣಗೊಂಡಿದೆ. ಇದೇ ಸಂದರ್ಭದಲ್ಲಿ ಉತ್ಪಾದನೆ ಕುಂಠಿತಗೊಂಡಿದೆ.

ವಿದ್ಯುತ್ ಪ್ರಸರಣ ನಿಗಮಗಳು ಮತ್ತು ಸರ್ಕಾರ ಕೆಪಿಟಿಸಿಎಲ್‌ಗೆ ಹಣ ಪಾವತಿಸದೇ ಇರುವುದರಿಂದ ಅಣೆಕಟ್ಟೆ ಹಾಗೂ ವಿದ್ಯುತ್ ಉತ್ಪಾದಿಸುವ ಯಂತ್ರಗಳನ್ನು ವಿವಿಧ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಅಡವಿಟ್ಟು ಸಾಲ ಪಡೆದಿದೆ.

ರಾಜ್ಯ ಸರ್ಕಾರ ಕರ್ನಾಟಕ ಪವರ್ ಕಾರ್ಪೊರೇಷನ್‌ಗೆ 21000 ಕೋಟಿ ರೂ. ಬಾಕಿ ಪಾವತಿಸಬೇಕು, ಆದರೆ, ಬಾಕಿ ಕೊಡುವುದಿರಲಿ, ಪ್ರತಿ ತಿಂಗಳು ಒಂದು ಸಾವಿರದಿಂದ 1200 ಕೋಟಿ ರೂ. ನೀಡಬೇಕಾದ ಹಣವನ್ನೂ ಪಾವತಿಸಿಲ್ಲ. ಗೃಹಜ್ಯೋತಿ ಯೋಜನೆ ಜಾರಿ ನಂತರ ಪ್ರಸರಣ ನಿಗಮಗಳು ಕೆಪಿಟಿಸಿಎಲ್‌ಗೆ ನೀಡಬೇಕಾದ ಹಣದಲ್ಲೂ ಕಡಿತವಾಗುತ್ತಿದೆ.

ಸರ್ಕಾರದ ಗ್ಯಾರೆಂಟಿ ಯೋಜನೆ ಅನುಷ್ಠಾನ, ಮತ್ತೊಂದೆಡೆ ರಾಜ್ಯದ ಬಹುಭಾಗ ಬರಕ್ಕೆ ಸಿಲುಕಿರುವುದರಿಂದ ವಿದ್ಯುತ್ ಬೇಡಿಕೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಬೇಡಿಕೆ ಒಂದೆಡೆ ಹೆಚ್ಚಳವಾಗುತ್ತಿದ್ದರೆ, ಮತ್ತೊಂದೆಡೆ, ಉತ್ಪಾದನೆ ಕುಂಠಿತವಾಗುತ್ತಿದೆ. ಗ್ರಾಹಕರ ಬೇಡಿಕೆ ಈಡೇರಿಸಲು ಕೆಪಿಟಿಸಿಎಲ್ ಅನ್ಯ ರಾಜ್ಯಗಳು ಮತ್ತು ಖಾಸಗಿ ಕಂಪನಿಗಳಿಂದ ವಿದ್ಯುತ್ ಖರೀದಿ ಮಾಡುವುದು ಅನಿವಾರ್ಯ.

ಖರೀದಿ ಮಾಡಲು ತಮ್ಮ ಬಳಿಯೂ ಹಣವಿಲ್ಲ, ಸರ್ಕಾರವೂ ನೀಡುತ್ತಿಲ್ಲ, ಆದರೆ, ಗ್ರಾಹಕರ ವಿದ್ಯುತ್ ಬೇಡಿಕೆಯನ್ನು ಪೂರ್ಣ ಪ್ರಮಾಣದಲ್ಲಿ ಈಡೇರಿಸಬೇಕಿದೆ. ಈ ಕಾರಣಕ್ಕಾಗಿ ತನ್ನ ಜಲಾಶಯಗಳನ್ನೇ ಅಡವಿಟ್ಟು ಸಾಲ ಪಡೆದಿದೆ, ಇದರೊಟ್ಟಿಗೆ ಪ್ರಮುಖ ಕಟ್ಟಡಗಳೂ ಅಡಮಾನದಲ್ಲಿವೆ.

ವಿವಿಧ ಇಲಾಖೆಗಳು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಾಲ ಪಡೆಯಲು ಸರ್ಕಾರ ಗ್ಯಾರೆಂಟಿ ಕೊಡುತ್ತದೆ. ಇದೇ ರೀತಿ ಕೆಪಿಟಿಸಿಎಲ್‌ಗೂ ಗ್ಯಾರೆಂಟಿ ಇದ್ದರೂ ಅದೂ ಸಾಲದೆ, ಅಡಮಾನ ಇಡುವಂತಾಗಿದೆ.

ವೀರಪ್ಪ ಮೊಯಿಲಿ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಸರ್ಕಾರಿ ನೌಕರರಿಗೆ ವೇತನ ನೀಡಲು ಕೊಲ್ಕತಾ ಮೂಲದ ಖಾಸಗಿ ವಿಮಾ ಸಂಸ್ಥೆಯಿಂದ 300 ಕೋಟಿ ರೂ. ಸಾಲ ಪಡೆದಿದ್ದರು.

ಅಂದು ಇದು ಭಾರೀ ವಿವಾದಕ್ಕೆ ಎಡೆ ಮಾಡಿತ್ತು. ನಂತರದ ದಿನಗಳಲ್ಲಿ ಅಧಿಕಾರಕ್ಕೆ ಬಂದ ಸರ್ಕಾರಗಳು ಐದು ಲಕ್ಷ ಕೋಟಿ ರೂ.ಗೂ ಹೆಚ್ಚು ಸಾಲ ಮಾಡಿವೆ.

## ದಾವಣಗೆರೆ ಬೆಣ್ಣೆದೋಸೆ ಬ್ರಾಂಡಿಂಗ್‌ಗೆ ಕ್ರಮ



### ಬೆಣ್ಣೆದೋಸೆ ಹೋಟೆಲ್ ಮಾಲೀಕರ ಸಭೆಯಲ್ಲಿ ಜಿಲ್ಲಾಧಿಕಾರಿ ವೆಂಕಟೇಶ್

ದಾವಣಗೆರೆ, ಡಿ.1- ದಾವಣಗೆರೆ ಬೆಣ್ಣೆದೋಸೆಗೆ ಬ್ರಾಂಡಿಂಗ್ ಮಾಡುವ ಮೂಲಕ ಪ್ರವಾಸೋದ್ಯಮದ ಜೊತೆಗೆ ಜೋಡಿಸುವ ಉದ್ದೇಶ ಹೊಂದಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ. ತಿಳಿಸಿದರು.

ಶುಕ್ರವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ದಾವಣಗೆರೆ ಬೆಣ್ಣೆದೋಸೆಗೆ ಬ್ರಾಂಡಿಂಗ್ ಕಲ್ಪಿಸಲು ಕರೆಯಲಾದ ಬೆಣ್ಣೆದೋಸೆ ಹೋಟೆಲ್‌ಗಳ ಮಾಲೀಕರು ಮತ್ತು ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ದಾವಣಗೆರೆ ಬೆಣ್ಣೆದೋಸೆಗೆ ರಾಜ್ಯದಲ್ಲಿ ತನ್ನದೇ ಆದಂತಹ ಹೆಸರಿದೆ. ಇದನ್ನು ಅಂತರರಾಜ್ಯ ಮತ್ತು ಅಂತರರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯುವ ಮೂಲಕ ಜಿಲ್ಲೆಯ ಹೆಸರನ್ನು ಹೆಚ್ಚಿಸ ಬೇಕಿದ್ದು, ಇಲ್ಲಿನ ಜನರಿಗೆ ಹೆಚ್ಚಿನ ಉದ್ಯೋಗ ಒದಗಿಸುವ ಚಿಂತನೆ ಮಾಡಲಾಗಿದೆ ಎಂದರು.

ದೋಸೆಗೆ ಬಳಸುವ ಆಹಾರಧಾನ್ಯಗಳು ಮತ್ತು ಮಾಡುವ ವಿಧಾನಗಳ ಬಗ್ಗೆ ಜನರಲ್ಲಿ ವಿಶ್ವಾಸ ಮೂಡಿಸುವ ಮೂಲಕ ಗುಣಮಟ್ಟದ ಖಾತರಿಯನ್ನು ಜನರಿಗೆ ಕಲ್ಪಿಸಬೇಕಾಗಿದೆ. ದಾವಣಗೆರೆ ನಗರ ರಾಷ್ಟ್ರೀಯ ಹೆದ್ದಾರಿ, ರೈಲ್ವೆ ಸಂಪರ್ಕ ಹೊಂದಿದ್ದು ಗೋವಾ, ಮಹಾರಾಷ್ಟ್ರಕ್ಕೆ ಹೋಗುವ ಪ್ರವಾಸಿಗರು, ಅಂತರರಾಜ್ಯ ಪ್ರಯಾಣಿಕರು ಸಹ ದಾವಣಗೆರೆ ಬೆಣ್ಣೆದೋಸೆ ಸವಿಯುವಂತೆ ಮಾಡುವುದು ಜಿಲ್ಲಾಡಳಿತದ ಉದ್ದೇಶವಾಗಿದ್ದು ರುಚಿಕರ, ಶುಚಿಕರ, ಗುಣಮಟ್ಟದ ದೋಸೆ ಪೂರೈಕೆ ಮಾಡುವುದು ಪ್ರಮುಖ ಉದ್ದೇಶವಾಗಿದೆ ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್, ಬೆಣ್ಣೆದೋಸೆ ಹೋಟೆಲ್ ಮಾಲೀಕರುಗಳು, ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

### ಇದೇ ತಿಂಗಳು ದೋಸೆ ಹಬ್ಬ

ದಾವಣಗೆರೆ ಬೆಣ್ಣೆದೋಸೆಯ ರುಚಿಯನ್ನು ಸವಿಯುವಂತೆ ಮಾಡಲು ವಿಶೇಷ ಕಾರ್ಯಕ್ರಮ ಮಾಡಲು ಉದ್ದೇಶಿಸಲಾಗಿದೆ. ಇದೇ ಡಿಸೆಂಬರ್‌ನ ಮೂರನೇ ವಾರದ ಅಂತ್ಯದಲ್ಲಿ ದೋಸೆ ಹಬ್ಬವನ್ನು ಆಚರಣೆ ಮಾಡುವ ಮೂಲಕ ದಾವಣಗೆರೆ ದೋಸೆಗೆ ಮೆರಗು ನೀಡಲಾಗುತ್ತಿದೆ. ಇಲ್ಲಿನ ದೋಸೆಗೆ ಅಂತರರಾಜ್ಯ ಮಟ್ಟದಲ್ಲಿಯೂ ರುಚಿಯನ್ನು ತೋರಿಸಲು ದೆಹಲಿ, ಪಶ್ಚಿಮ ಬಂಗಾಲ, ಉತ್ತರಪ್ರದೇಶ ಸೇರಿದಂತೆ ಉತ್ತರದ ರಾಜ್ಯಗಳಲ್ಲಿ ನಡೆಯುವ ವಿಶೇಷ ಉತ್ಸವ, ಸಮ್ಮೇಳನಗಳಿಗೆ ಇಲ್ಲಿನ ಹೋಟೆಲ್ ಮಾಲೀಕರನ್ನು ಪ್ರತಿನಿಧಿಯನ್ನಾಗಿ ಕಳುಹಿಸುವ ಮೂಲಕ ಇಲ್ಲಿನ ದೋಸೆ ರುಚಿಯನ್ನು ಸವಿಯುವಂತೆ ಮಾಡಲಾಗುತ್ತದೆ ಎಂದು ಜಿಲ್ಲಾಧಿಕಾರಿ ಹೇಳಿದ್ದಾರೆ.

### ಬೆಣ್ಣೆದೋಸೆ ಹೋಟೆಲ್‌ಗಳಿಗೆ ಪ್ರಮಾಣ ಪತ್ರ

ಬೆಣ್ಣೆದೋಸೆ ಹೋಟೆಲ್‌ಗಳಿಗೆ ಗುಣಮಟ್ಟದ ಖಾತರಿಯನ್ನು ಒದಗಿಸಲು ಆಹಾರ ಸುರಕ್ಷತಾ ಕಾಯಿದೆಯನ್ವಯ ಪರಿಶೀಲನೆ ನಡೆಸಿ ದೋಸೆಗೆ ಬಳಸುವ ಧಾನ್ಯಗಳು, ಬೆಣ್ಣೆ, ಎಣ್ಣೆ ಮತ್ತು ಇತರೆ ವಸ್ತುಗಳು, ಅಲ್ಲಿನ ಆರೋಗ್ಯವಂತ ಸಿಬ್ಬಂದಿಗಳ ತಪಾಸಣೆ ಸೇರಿದಂತೆ ಸಾರ್ವಜನಿಕರ ಆರೋಗ್ಯ ಸುರಕ್ಷತೆಯ ಮಾನದಂಡಗಳನ್ನು ಪರಿಶೀಲಿಸಿ ಜಿಲ್ಲಾಡಳಿತದಿಂದ ಬ್ರಾಂಡಿಂಗ್ ಪ್ರಮಾಣ ಪತ್ರವನ್ನು ನೀಡುವ ಮೂಲಕ ಪ್ರವಾಸೋದ್ಯಮಕ್ಕೆ ಈ ಹೋಟೆಲ್‌ಗಳನ್ನು ಜೋಡಣೆ ಮಾಡಲಾಗುತ್ತದೆ. ಪ್ರಮಾಣ (2ನೇ ಪುಟಕ್ಕೆ)

## 'ರೂಢಿ' ಬಿಟ್ಟು ಪ್ರಗತಿ ತೋರಿದ ಮೋದಿ-ಮನಮೋಹನ್

### ಮೌನಿ ಸಿಂಗ್, ಮಾತಿನ ಮೋದಿಯ ನೀತಿಗಳಿಗೆ ಪತ್ರಕರ್ತ ರವೀಂದ್ರ ರೇಷ್ಮೆ ಪ್ರಶಂಸೆ



ದಾವಣಗೆರೆ, ಡಿ. 1 – ಮೌನ ಸ್ವಭಾವದ ಮನಮೋಹನ್ ಸಿಂಗ್ ಹಾಗೂ ಮಾತುಗಾರಿಕೆಯ ನರೇಂದ್ರ ಮೋದಿ ಅವರಿಬ್ಬರೂ ಅನಿರೀಕ್ಷಿತವಾಗಿ ರಾಜಕೀಯಕ್ಕೆ ಬಂದು ಪ್ರಧಾನ ಮಂತ್ರಿಗಳಾಗಿ, ಅನೂಹ್ಯ ರೀತಿಯ ಬದಲಾವಣೆಗಳನ್ನು ತಂದಿದ್ದಾರೆ. ಪಕ್ಷಗಳ ರೂಢಿಗತ ಸಿದ್ಧಾಂತಗಳನ್ನು ಮೀರಿ ದೇಶವನ್ನು ಬೆಳೆಸಿದ್ದಾರೆ ಎಂದು ಹಿರಿಯ ಪತ್ರಕರ್ತ ರವೀಂದ್ರ ರೇಷ್ಮೆ ಅಭಿಪ್ರಾಯ ಪಟ್ಟಿದ್ದಾರೆ.

ದಾವಣಗೆರೆ ವಿಶ್ವವಿದ್ಯಾಲಯ ಹಾಗೂ ಜಯರತ್ನ ಕಲ್ಯಾಣ ಕೇಂದ್ರ ಟ್ರಸ್ಟ್‌ಗಳ ಸಂಯುಕ್ತಾಶ್ರಯದಲ್ಲಿ ನಗರದ ಬಾಪೂಜಿ ಎಂ.ಬಿ.ಎ. ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಜಯಣ್ಣ ಚಿಗಟೇರಿ ದತ್ತಿ ಉಪನ್ಯಾಸದಲ್ಲಿ ಅವರು ಮಾತನಾಡಿದರು.

1991ರಲ್ಲಿ ಮನಮೋಹನ್ ಸಿಂಗ್ ಅವರು ಹಣಕಾಸು ಸಚಿವರಾದ ಸಂದರ್ಭದಲ್ಲಿ ಖಾಸಗೀಕರಣ, ಉದಾರೀಕರಣ ಹಾಗೂ ಜಾಗತೀಕರಣವನ್ನು ಭಾರತಕ್ಕೆ ಪರಿಚಯಿಸಿದರು. ನಂತರ 2004ರಲ್ಲಿ ಪ್ರಧಾನಿಯಾಗಿ ದೇಶದ ಆರ್ಥಿಕತೆಯನ್ನು ಮುನ್ನಡೆಸಿದರು. ಸಿಂಗ್ ಅವರ ಆರ್ಥಿಕ ನೀತಿಯಿಂದಾಗಿ ದೇಶ ಶ್ರೀಮಂತವಾಯಿತು. ಸಿಂಗ್ ದೇಶದಲ್ಲಿ ಮೌನ ಕ್ರಾಂತಿ ತಂದರು ಎಂದು ಹೇಳಿದರು.

ಆದರೆ, ಸಿಂಗ್ ಮಾತ್ರ ಶ್ರೀಮಂತಿಕೆಯ ದುರಾಸೆ ತೋರಲಿಲ್ಲ. ಅಧಿಕಾರಕ್ಕೆ ಬಂದಾಗ ಎಷ್ಟು ಆಸ್ತಿ ಹೊಂದಿದ್ದರೋ, ಅಧಿಕಾರ ತೊರೆದಾಗಲೂ ಅಷ್ಟೇ ಆಸ್ತಿ ಹೊಂದಿದ್ದರು ಎಂದು ರೇಷ್ಮೆ ಹೇಳಿದರು.

ನರೇಂದ್ರ ಮೋದಿ ಅವರು 2001ರಲ್ಲಿ ಗುಜರಾತ್ ಮುಖ್ಯಮಂತ್ರಿಯಾಗಿದ್ದೂ ಸಹ ಅನಿರೀಕ್ಷಿತ. ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಅವರು ಗುಜರಾತ್‌ನಲ್ಲೂ ಹೆಚ್ಚು ಪರಿಚಿತರಾಗಿರಲಿಲ್ಲ. ನಂತರ 2014ರಲ್ಲಿ ಪ್ರಧಾನಿಯೂ ಆದರು. ಮೋದಿ ಒಂದು ರೀತಿಯಲ್ಲಿ ಪ್ರಜಾಪ್ರಭುತ್ವದ ವಿಸ್ಮಯ ಎಂದು ರವೀಂದ್ರ ರೇಷ್ಮೆ ಹೇಳಿದರು.

ರಾಮ ಮಂದಿರ ವಿಷಯದ ಮೂಲಕವೇ ಬಿಜೆಪಿ ಬೃಹತ್ತಾಗಿ ಬೆಳೆದಿತ್ತು. ಆದರೆ, ಮೋದಿ ದೇವಾಲಯಕ್ಕಿಂತ ಶೌಚಾಲಯವೇ ಮುಖ್ಯ ಎಂಬ ಸ್ವಾಮಿ ವಿವೇಕಾನಂದರ ನುಡಿ ನೆನಪಿಸಿದರು. 11 ಕೋಟಿ ಶೌಚಾಲಯ ನಿರ್ಮಾಣಕ್ಕೆ ಸ್ವಚ್ಛ ಭಾರತ ಯೋಜನೆ ರೂಪಿಸಿದರು.

ಜನ್ ಧನ್ (2ನೇ ಪುಟಕ್ಕೆ)

### ವಿರೋಧಿಗಳು ಮೆಚ್ಚಿದರು, ಪಕ್ಷದವರು ಮರೆತರು

ಕಾಂಗ್ರೆಸ್ ಹಿರಿಯ ನಾಯಕ ಹಾಗೂ ಮಾಜಿ ಪ್ರಧಾನ ಮಂತ್ರಿ ನರಸಿಂಹ ರಾವ್ ಅವರನ್ನು 'ತೆಲುಗು ಬಿಡ್ಡ' (ತೆಲುಗು ಪುತ್ರ) ಎಂದು ಕರೆಯಲಾಗುತ್ತದೆ. ವಿಪರ್ಯಾಸ ಎಂದರೆ ಇತ್ತೀಚೆಗೆ ನಡೆದ ತೆಲಂಗಾಣ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅವರನ್ನು ಸ್ಮರಿಸಲೇ ಇಲ್ಲ ಎಂದು ಪತ್ರಕರ್ತ ರವೀಂದ್ರ ರೇಷ್ಮೆ ಹೇಳಿದರು.

ಪಂಜಾಬ್ ವಿಧಾನಸಭಾ ಚುನಾವಣೆಯಲ್ಲೂ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಹೆಸರನ್ನು ಕಾಂಗ್ರೆಸ್ ಪ್ರಸ್ತಾಪಿಸಲಿಲ್ಲ. ಆದರೆ, ಸಿಂಗ್ 2014ರಲ್ಲಿ ಪ್ರಧಾನ ಮಂತ್ರಿ ಸ್ಥಾನದಿಂದ ಕೆಳಗಿಳಿದಾಗ ಅವರನ್ನು ಅತ್ಯುತ್ತಮವಾಗಿ ಹೊಗಳಿದ್ದು ಬಿಜೆಪಿಯ ಹಿರಿಯ ನಾಯಕ ಅರುಣ್ ಜೇಟ್ಲಿ. ಸಿಂಗ್ ಅವರ ಕಾಲಾವಧಿಯಲ್ಲಿ ಭಾರತದ ಸುಶಿಕ್ಷಿತ ಮಧ್ಯಮ (2ನೇ ಪುಟಕ್ಕೆ)

## ಸಿ.ಬಿ.ಎಸ್.ಇ. ಪರೀಕ್ಷೆಗೆ ದರ್ಜೆ, ಡಿಸ್ಟಿಂಕ್ಷನ್ ಇಲ್ಲ

ನವದೆಹಲಿ, ಡಿ. 1- ಹತ್ತು ಹಾಗೂ ಹನ್ನೆರಡನೇ ತರಗತಿಯ ಮಂಡಳಿ ಪರೀಕ್ಷೆಯ ಅಂಕ ಪಟ್ಟಿಗಳಲ್ಲಿ ಇನ್ನು ಮುಂದೆ ಯಾವುದೇ ಡಿಸ್ಟಿಂಕ್ಷನ್ ಇಲ್ಲವೇ ದರ್ಜೆ ಪ್ರಕಟಿಸುವುದಿಲ್ಲ ಎಂದು ಸಿ.ಬಿ.ಎಸ್.ಇ. ತಿಳಿಸಿದೆ.

ಸಿ.ಬಿ.ಎಸ್.ಇ.ಯ 10 ಹಾಗೂ 12ನೇ ತರಗತಿ ಪರೀಕ್ಷೆಗಳ ಅಂಕ ಪಟ್ಟಿಯಲ್ಲಿ ದರ್ಜೆ, ಡಿಸ್ಟಿಂಕ್ಷನ್ ಇಲ್ಲವೇ ಒಟ್ಟು ಅಂಕಗಳನ್ನು ಪ್ರಕಟಿಸುವುದಿಲ್ಲ ಎಂದು ಸಿ.ಬಿ.ಎಸ್.ಇ. ಪರೀಕ್ಷಾ ನಿಯಂತ್ರಕರಾದ ಸನ್ಯಮ್ ಭಾ ರ ಧ್ವಾ ಜ್ (2ನೇ ಪುಟಕ್ಕೆ)

## 2 ಸಾವಿರ ನೋಟು ಚಲಾವಣೆಯಲ್ಲಿ

ಮುಂಬೈ, ಡಿ. 1- ಶೇ.97.2 6ರಷ್ಟು 2 ಸಾವಿರ ರೂ.ಗಳ ನೋಟುಗಳು ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿವೆ. ಇನ್ನೂ 9,760 ಕೋಟಿ ರೂ.ಗಳ ನೋಟುಗಳು ಮಾತ್ರ ಸಾರ್ವಜನಿಕರ ಬಳಿ ಉಳಿದಿವೆ ಎಂದು ರಿಸರ್ವ್ ಬ್ಯಾಂಕ್ ಹೇಳಿದೆ.

ಕಳೆದ ಮೇ 19ರಂದು ರಿಸರ್ವ್ ಬ್ಯಾಂಕ್ 2 ಸಾವಿರ ರೂ. ನೋಟುಗಳನ್ನು ವಾಪಸ್ ಪಡೆಯುವುದಾಗಿ ತಿಳಿಸಿತ್ತು. ಆ ಸಂದರ್ಭದಲ್ಲಿ 3.56 (3ನೇ ಪುಟಕ್ಕೆ)

## ನಕಲಿ ಜಿ.ಎಸ್.ಟಿ.: 4,716 ಕೋಟಿ ರೂ. ವಹಿವಾಟು

ಕೋಲ್ಕೊತಾ, ಡಿ. 1 – ಜಿ.ಎಸ್.ಟಿ.ಯ ನಕಲಿ ಇನ್ವಾಯ್ಸ್ ರೂಪಿಸಿ 4,716 ಕೋಟಿ ರೂಗಳ ವಹಿವಾಟು ನಡೆಸುತ್ತಿದ್ದ ಜಾಲವನ್ನು ಪಶ್ಚಿಮ ಬಂಗಾಳದ ರಾಜ್ಯ ಜಿ.ಎಸ್.ಟಿ. ವಾಣಿಜ್ಯ ತೆರಿಗೆ ನಿರ್ದೇಶನಾಲಯ ಬಯಲಿಗೆ ಎಳೆದಿದೆ. 4,716 ಕೋಟಿ ರೂ.ಗಳ ವಹಿವಾಟಿನಲ್ಲಿ ವಂಚನೆ ಮಾಡಲಾಗಿದೆ. ಇದರಿಂದಾಗಿ ರಾಜ್ಯ ಸರ್ಕಾರಕ್ಕೆ 801 ಕೋಟಿ ರೂ.ಗಳ ತೆರಿಗೆ ವಂಚನೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಎಟಿಎಂ ಭದ್ರತೆಗೆ ಗುಣಮಟ್ಟದ ಸಿಸಿ ಟಿವಿ ಬ್ಯಾಂಕ್‌ಗಳಿಗೆ ಎಸ್ಪಿ ಸೂಚನೆ




ದಾವಣಗೆರೆ,ಡಿ.1- ನಗರದ ಜಿಲ್ಲಾ ಪೊಲೀಸ್ ಕಛೇರಿಯಲ್ಲಿ ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಉಮಾ ಪ್ರಶಾಂತ್ ಅಧ್ಯಕ್ಷತೆಯಲ್ಲಿ ಬ್ಯಾಂಕ್ ಎಟಿಎಂಗಳ ಭದ್ರತೆ ಸಂಬಂಧ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಬ್ಯಾಂಕ್ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ದಿನದ 24 ಗಂಟೆ ಕಾರ್ಯ ನಿರ್ವಹಿಸುವ ಎಲ್ಲಾ ಎಟಿಎಂಗಳಲ್ಲಿ ಕಡ್ಡಾಯವಾಗಿ ಉತ್ತಮ ಗುಣಮಟ್ಟದ ಸಿಸಿಟಿವಿ ಹಾಕುವುದು, ಗಾರ್ಡ್ ವ್ಯವಸ್ಥೆ ಮಾಡುವುದು. ಸಿಸಿಟಿವಿ ಒಳಗಡೆ ಹಾಕುವುದರ ಜೊತೆಗೆ ಎಟಿಎಂಗಳ ಹೊರ ಭಾಗದಲ್ಲಿ ಎಟಿಎಂಗಳಿಗೆ ಹಾಗೂ ಎಟಿಎಂ ಮುಂದೆ ಸಂಚರಿಸುವವರು ಕಾಣುವಂತೆ ಸಿಸಿಟಿವಿಗಳನ್ನು ಅಳವಡಿಸಬೇಕು. ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಮುಂಜಾಗೃತ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಲಾಯಿತು.

ಬ್ಯಾಂಕುಗಳಿಗೆ ಬರುವ ಸಾರ್ವಜನಿಕರಲ್ಲಿ ಅನುಮಾನಾಸ್ಪದ ವ್ಯಕ್ತಿಗಳು (3ನೇ ಪುಟಕ್ಕೆ)

## ಏಳೆಂಟು ಮಕ್ಕಳನ್ನು ಹೊಂದುವುದು ಗುರಿಯಾಗಲಿ



ನವದೆಹಲಿ, ಡಿ. 1 – ರಷ್ಯಾದ ಮಹಿಳೆಯರು ಹೆಚ್ಚು ಮಕ್ಕಳನ್ನು ಹೊಂದಬೇಕು. ಹಿಂದಿನ ಪೀಳಿಗೆಯವರು ಏಳೆಂಟು ಮಕ್ಕಳ ದೊಡ್ಡ ಕುಟುಂಬ ಹೊಂದುತ್ತಿದ್ದುದು ಆದರ್ಶವಾಗಬೇಕು ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುತಿನ್ ಕರೆ ನೀಡಿದ್ದಾರೆ.

1990ರಿಂದಲೂ ರಷ್ಯಾದಲ್ಲಿ ಜನನ ದರ ಕುಸಿಯುತ್ತಿದೆ. ಇತ್ತೀಚೆಗೆ ನಡೆದ ಉಕ್ರೇನ್ ಯುದ್ಧದಿಂದ ದೊಡ್ಡ ಪ್ರಮಾಣದಲ್ಲಿ ಸಾವುಗಳು ಸಂಭವಿಸಿವೆ. ಈ ಹಿನ್ನೆಲೆಯಲ್ಲಿ ರಷ್ಯಾದಲ್ಲಿ ಜನನ ದರ ಹೆಚ್ಚಿಸುವ ತುರ್ತು ಅಗತ್ಯವಿದೆ. ರಷ್ಯಾದ ಜನಸಂಖ್ಯೆ ಹೆಚ್ಚಿಸುವುದು ಬರುವ ದಶಕಗಳಲ್ಲಿ ನಮ್ಮ ಗುರಿಯಾಗಬೇಕಿದೆ. ನಮ್ಮ ಹಲವಾರು ಬುಡಕಟ್ಟು, ಗುಂಪುಗಳು ಹೆಚ್ಚು ಮಕ್ಕಳನ್ನು ಹೊಂದುವ ಸಂಪ್ರದಾಯ ಮುಂದುವರೆಸಿವೆ ಎಂದೂ ಪುತಿನ್ ಹೇಳಿದ್ದಾರೆ.

ಈ ಅತ್ಯುತ್ತಮ (3ನೇ ಪುಟಕ್ಕೆ)

## ಹೆಗಡೆ ನಗರ ಸುತ್ತ ಮುತ್ತಲಿನ ಪ್ರದೇಶಕ್ಕೆ ಪ್ರವೇಶ ನಿಷೇಧ

ದಾವಣಗೆರೆ, ಡಿ.1- ಮಹಾನಗರ ಪಾಲಿಕೆ ವ್ಯಾಪ್ತಿಯ ರಿಂಗ್ ರಸ್ತೆಯಿಂದ ಮಾಗಾನಹಳ್ಳಿ ರಸ್ತೆಗೆ ಸೇರುವ ಹೆಗಡೆ ನಗರ ಹಾಗೂ ಸುತ್ತ ಮುತ್ತಲಿನ ಪ್ರದೇಶವನ್ನು ಇಂದು ದಿನಾಂಕ 2 ರಿಂದ ಬೆಳಿಗ್ಗೆ 5.30 ಗಂಟೆಯಿಂದ ದಿನಾಂಕ 3ರ ಬೆಳಿಗ್ಗೆ 5.30ರವರೆಗೆ ಸಾರ್ವಜನಿಕ ಪ್ರವೇಶಕ್ಕೆ ನಿಷೇಧಿತ ಪ್ರದೇಶ ಎಂದು ಘೋಷಿಸಿ ಉಪ ವಿಭಾಗಾಧಿಕಾರಿ ಎನ್. ದುರ್ಗಾಶ್ರೀ ಆದೇಶಿಸಿದ್ದಾರೆ.

ಪಿ.ಬಿ. ರಸ್ತೆಯಿಂದ ಮಾಗಾನಹಳ್ಳಿ ರಸ್ತೆಯವರೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ರಿಂಗ್ ರಸ್ತೆ ನಿರ್ಮಾಣ ಮಾಡಬೇಕಾಗಿರುವುದರಿಂದ ಹೆಗಡೆ ನಗರದಲ್ಲಿ ವಾಸಿಸುತ್ತಿರುವ ವಸತಿ ರಹಿತ ಒತ್ತುವರಿದಾರರನ್ನು ದೊಡ್ಡಬಾತಿ ಗ್ರಾಮದ ರಿ.ಸಂ.ನಂ.53/1ಬಿ, 1ಸಿರಲ್ಲಿ ಅಂತಿಮ ವಿನ್ಯಾಸ ನಕ್ಷೆ ಅನುಮೋದನೆಯಾಗಿರುವ ಸ್ಥಳಕ್ಕೆ ಸ್ಥಳಾಂತರಿಸಬೇಕಾಗಿದ್ದು, ಕಾನೂನು ಸುವ್ಯವಸ್ಥೆ ಹಿತದೃಷ್ಟಿಯಿಂದ ಸ್ಥಳಾಂತರ ಕಾರ್ಯ ಸುಗಮವಾಗಿ ನಡೆಯಲು ಈ ಪ್ರದೇಶವನ್ನು ನಿಷೇಧಿತ ಎಂದು ಘೋಷಿಸಿರುವುದಾಗಿ ಅವರು ಆದೇಶದಲ್ಲಿ ತಿಳಿಸಿದ್ದಾರೆ.

## ಬೆಂಗಳೂರಿನ ಶಾಲೆಗಳಿಗೆ ಹುಸಿ ಬಾಂಬ್ ಬೆದರಿಕೆ

ಬೆಂಗಳೂರು, ಡಿ. 1 – ಬೆಂಗಳೂರಿನ 68 ಖಾಸಗಿ ಶಾಲೆಗಳಿಗೆ ಶುಕ್ರವಾರ ಬೆಳಿಗ್ಗೆ ಬಾಂಬ್ ಬೆದರಿಕೆಯ ಇ-ಮೇಲ್ ಬಂದಿದೆ. ಇದರಿಂದಾಗಿ ಶಾಲಾ ಸಿಬ್ಬಂದಿ ಹಾಗೂ ಪೋಷಕರಲ್ಲಿ ತೀವ್ರ ಆತಂಕ ಉಂಟಾಗಿತ್ತು.

ಶಾಲಾ ಅಧಿಕಾರಿಗಳು ಬೆದರಿಕೆಯ ಬಗ್ಗೆ ತಕ್ಷಣವೇ ಪೊಲೀಸರಿಗೆ ತಿಳಿಸಿದ್ದಾರೆ. ಪೊಲೀಸರು ಬಾಂಬ್ ನಿಷ್ಕ್ರಿಯ ದಳದೊಂದಿಗೆ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದಾರೆ.

ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಯನ್ನು ತಕ್ಷಣವೇ ಶಾಲಾ ಆವರಣದಿಂದ ತೆರವುಗೊಳಿಸಲಾಗಿತ್ತು. ತಪಾಸಣೆ ಮಾಡಿದಾಗ ಯಾವುದೇ ಶಂಕಾಸ್ಪದ ವಸ್ತುಗಳು ಕಂಡು ಬಂದಿಲ್ಲ. ಇದು ಹುಸಿ ಬೆದರಿಕೆಯಂತೆ ಕಾಣುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

ಇದುವರೆಗೂ ಬೆಂಗಳೂರಿನ 68 ಶಾಲೆಗಳಿಗೆ ಬೆದರಿಕೆ ಬಂದಿದೆ. ಮೇಲ್ನೋಟಕ್ಕೆ ಇದು ಹುಸಿ ಕರೆಯಂತೆ ಕಂಡು ಬರುತ್ತಿದೆ. ಈ ಬಗ್ಗೆ ಪ್ರಕರಣ ದಾಖಲಿಸಿಕೊಳ್ಳುತ್ತಿದ್ದೇವೆ ಎಂದು ಹಿರಿಯ ಪೊಲೀಸ್ (3ನೇ ಪುಟಕ್ಕೆ)

|| ಶ್ರೀ ಕೋಗುಂಡೆ ಬಸವೇಶ್ವರ ಪ್ರಸನ್ನ ||

ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ಜಿ||, ತಾ|| ಕಬ್ಬೂರು ಗ್ರಾಮದ ವಾಸಿ
ಶ್ರೀಮತಿ ಪಾರ್ವತಮ್ಮ
ದಿ|| ಶ್ರೀ ಕೆ.ಜಿ. ಬಸವರಾಜಪ್ಪ ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 24.11.2023ನೇ ಶುಕ್ರವಾರ ರಾತ್ರಿ 11.50ಕ್ಕೆ ನನ್ನ ಮಗನಾದ
ಶ್ರೀ ಕೆ.ಬಿ. ದಯಾನಂದರವರು
ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
"ಕೈಲಾಸ ಶಿವಗಣಾರಾಧನೆ"ಯನ್ನು
ದಿನಾಂಕ : 02.12.2023ನೇ ಶನಿವಾರ ಬೆಳಿಗ್ಗೆ 10.30ಕ್ಕೆ
ಕೆ.ಬಿ. ಬಡಾವಣೆ, ಕಿರುವಾಡಿ ಲೇಔಟ್, ದಾವಣಗೆರೆಯಲ್ಲಿರುವ
ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು
ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ
ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀಮತಿ ಪಾರ್ವತಮ್ಮ ದಿ|| ಶ್ರೀ ಕೆ.ಜಿ. ಬಸವರಾಜಪ್ಪ ಮತ್ತು ಮಕ್ಕಳು, ಸಹೋದರರು, ಅಳಿಯಂದಿರು,
ಗಂಗಜ್ಜರ ವಂಶಸ್ಥರು, ಕಬ್ಬೂರು ಹಾಗೂ ಅಪಾರ ಬಂಧು-ಮಿತ್ರರು. ಫೋ. : 9449674899

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

ಭಾವಪೂರ್ಣ ಶ್ರದ್ಧಾಂಜಲಿ

ದಿನಾಂಕ: 24.11.2023 ರಂದು ನಿಧನರಾದ ಎಲ್ಲರ ಪ್ರೀತಿಪಾತ್ರರು, ಅಜಾತಶತ್ರು



ಶ್ರೀ ಬೇತೂರು ತಿಪ್ಪೇಶ್
02-12-2023 – ಮೃತರ ಸ್ವಗೃಹದಲ್ಲಿ ಶಿವಗಣಾರಾಧನೆ

BMS
ಬಿ.ಮುರಿಗೆಪ್ಪ ಸಿದ್ಧರಾಮಪ್ಪ
ಮಂಡಿಪೇಟೆ, ದಾವಣಗೆರೆ.
asianpaints

# ನಗರದಲ್ಲಿ ಇಂದು ನೃತ್ಯ ಕಲಾವಿದೆ ಸಹನಾ ರಂಗ ಪ್ರವೇಶ

ನೃತ್ಯ ಕಲಾವಿದೆ ಕು. ಬಿ.ಸಹನಾ ಅವರ ಭರತನಾಟ್ಯ ರಂಗ ಪ್ರವೇಶ ಕಾರ್ಯಕ್ರಮವು ಕುವೆಂಪು ಕನ್ನಡ ಭವನದಲ್ಲಿ ಇಂದು ಜರುಗಲಿದೆ.

ಅಧ್ಯಕ್ಷತೆಯನ್ನು ಡಾ. ಎಸ್.ಎಸ್.ಎನ್.ಪಿ.ಎಸ್. ಶಾಲೆಯ ಮುಖ್ಯಸ್ಥ ಮಂಜುನಾಥ ರಂಗರಾಜು ವಹಿಸುವರು. ಮುಖ್ಯ ಅತಿಥಿಗಳಾಗಿ ವಿಜಯಕರ್ನಾಟಕ ದಿನಪತ್ರಿಕೆ ಸ್ಥಾನಿಕ ಸಂಪಾದಕ ಸದಾನಂದ ಹೆಗಡೆ, ಬೆಂಗಳೂರಿನ ಬಿಎನ್‌ಎಂ ತಾಂತ್ರಿಕ ಕಾಲೇಜಿನ ಪ್ರೊಫೆಸರ್ ಡಾ.ಅಮಿತ್ ಶೇಖರ್, ಡಾ. ಎಸ್.ಎಸ್.ಎನ್.ಪಿ.ಎಸ್. ಶಾಲೆ ಮಾಜಿ ಪ್ರಾಂಶುಪಾಲರಾದ ಡಾ.ಪ್ರೀತಿ ಸಿಂಗ್, ಸಾಗರದ ನಾಟ್ಯ ತರಂಗ ಟ್ರಸ್ಟ್‌ನ ವಿದ್ವಾನ್ ಜಿ.ಬಿ. ಜನಾರ್ದನ್ ಮತ್ತು ಶ್ರೀಮತಿ ವರದಾಂಬಿಕ ಜನಾರ್ದನ್ ಮತ್ತು ಬಿಐಇಟಿ ಪ್ರಾಂಶುಪಾಲ ಹೆಚ್. ಬಿ.ಅರವಿಂದ್ ಆಗಮಿಸುವರು.



ಈ ರಂಗಪ್ರವೇಶ ಕಾರ್ಯಕ್ರಮದಲ್ಲಿ ನರ್ತಿಸುವ ಎಲ್ಲ ನೃತ್ಯ ಬಂಧುಗಳ ಸಾಹಿತ್ಯ, ರಚನೆ ಮತ್ತು ಸಂಗೀತ ಸಂಯೋಜನೆಯನ್ನು ಗುರುಗಳಾದ ರಾಜಗೋಪಾಲ ಭಾಗವತ ಮತ್ತು ಪೂರ್ಣಿಮಾ ಭಾಗವತರು ಮಾಡಿರುತ್ತಾರೆ.

**ಕಲಾವಿದೆ ಸಹನಾ ಪರಿಚಯ:** ವರ್ತಕ ಬಸವರಾಜ ಬನ್ನೆಟ್ಟಿ ಮತ್ತು ರೇಣುಕ ದಂಪತಿಯ ಪುತ್ರಿ ಸಹನಾ, ಶ್ರೀ ಶಾರದಾ ಸಂಗೀತ ಮತ್ತು ನೃತ್ಯ ಕಲಾಶಾಲೆಯಲ್ಲಿ ತಮ್ಮ 10ನೇ ವಯಸ್ಸಿನಿಂದಲೇ ಗುರುಗಳಾದ ವಿದುಷಿ ಶ್ರೀಮತಿ ಪೂರ್ಣಿಮಾ ಭಾಗವತರ ಶಿಷ್ಯೆಯಾಗಿ ನೃತ್ಯ ಅಭ್ಯಾಸ ಮಾಡಿದ್ದಾರೆ. ಅಲ್ಲದೇ ವಿದ್ವಾನ್ ರಾಜ ಗೋಪಾಲ ಭಾಗವತರಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಅಭ್ಯಾಸ ಮಾಡಿದ್ದಾರೆ.

## ಹರಿಹರ : ಸುಗಮ ಸಂಗೀತ ಪರಿಷತ್ತಿಗೆ ಆಯ್ಕೆ



ಹರಿಹರ, ಡಿ.1- ಇಲ್ಲಿನ ಸುಗಮ ಸಂಗೀತ ಪರಿಷತ್ತಿನ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದ್ದು, ಪರಿಷತ್ತಿನ ಗೌರವ ಅಧ್ಯಕ್ಷರಾಗಿ ಶಿವಕುಮಾರ್ ಕರಡಿ, ಅಧ್ಯಕ್ಷರಾಗಿ ಶ್ರೀಮತಿ ಮಾಧುರಿ ಶೇಷಗಿರಿ, ಪ್ರಧಾನ ಕಾರ್ಯದರ್ಶಿಯಾಗಿ ಶ್ರೀಮತಿ ಎಸ್.ಬಿ.ಅಶ್ವಿನಿ ಅರುಣ್‌ಕುಮಾರ್, ಸಹ ಕಾರ್ಯದರ್ಶಿಗಳಾಗಿ ಶ್ರೀಮತಿ ಬಿ.ಎಸ್.ರೇಖಾ, ಖಜಾಂಚಿಯಾಗಿ ಯು.ಬಿ ಕೊಟ್ರೇಶಪ್ಪ, ಉಪಾಧ್ಯಕ್ಷರಾಗಿ ಶ್ರೀಮತಿ. ಸುಮನ್ ಖಮಿತ್ಕರ್, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಎಸ್.ಕೆ.ವೀರೇಶ್ ಕುಮಾರ್, ಡಿ.ಕುಮಾರ್, ಮಮತಾ, ಜಯಮ್ಮ ಸೋತ್ತಪ್ಪನವರ್, ಗೌರವ ಸಲಹೆಗಾರರಾಗಿ ಬಿ.ರೇವಣಸಿದ್ದಪ್ಪ, ಪ್ರಮೀಳಾ ನಲ್ಲೂರು, ಪರಮೇಶ್ವರಪ್ಪ ಕೊಟಗಿ, ಕೆ.ವಿ. ಉಮಾ ಇತರರನ್ನು ನೇಮಿಸಲಾಗಿದೆ.

## ಜಮೀರ್ ವಿರುದ್ಧ ವಿಜಯೇಂದ್ರ ಹೇಳಿಕೆ ಖಂಡನೀಯ: ಮಾಜಿ ಶಾಸಕ ರಾಮಪ್ಪ

ದಾವಣಗೆರೆ, ಡಿ.1- ಸಚಿವ ಜಮೀರ್ ಅಹ್ಮದ್ ಖಾನ್ ಅವರ ಬಗ್ಗೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವಹೇಳನಕಾರಿಯಾಗಿ ಮಾತನಾಡಿರುವುದು ಖಂಡನೀಯ ಎಂದು ಹರಿಹರ ಮಾಜಿ ಶಾಸಕ ಎಸ್.ರಾಮಪ್ಪ ಹೇಳಿದ್ದಾರೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಧಮಕಿ ಹಾಕುವಂತಿರುವ ಪ್ರಚೋದನಕಾರಿ ಹೇಳಿಕೆಗಳು ಬಿಜೆಪಿ ರಾಜ್ಯಾಧ್ಯಕ್ಷರಿಗೆ ಶೋಭೆ ತರುವುದಿಲ್ಲ ಎಂದು ಹೇಳಿದರು.

ಮುಂಬರುವ ಲೋಕಸಭಾ ಚುನಾವಣೆಗೆ ಕಾಂಗ್ರೆಸ್ ಪಕ್ಷದಿಂದ ಟಿಕೆಟ್ ಕೇಳಿ ಅರ್ಜಿ ಸಲ್ಲಿಸಿದ್ದೇನೆ ಎಂದ ರಾಮಪ್ಪ, ಹೈಕಮಾಂಡ್ ಯಾರಿಗೆ ಟಿಕೆಟ್ ನೀಡಿದರೂ ಅವರ ಪರ ಕೆಲಸ ಮಾಡುವುದಾಗಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮೊಹಮ್ಮದ್ ಫೈರೋಜ್, ಬಾಬುಲಾಲ್ ಎಂ.ಎಸ್., ಹಂಚಿನ ನಾಗಪ್ಪ ಉಪಸ್ಥಿತರಿದ್ದರು.



## ನಾಳೆ ಕ್ಷತ್ರಿಯ ಮರಾಠ ವಧು-ವರರ ಸಮಾವೇಶ

ದಾವಣಗೆರೆ, ಡಿ. 1 - ಕ್ಷತ್ರಿಯ ಮರಾಠ ವಧು-ವರರ ಸಮಾವೇಶವು ನಾಡಿದ್ದು ದಿನಾಂಕ 3ರ ಭಾನುವಾರ ಬೆಳಿಗ್ಗೆ ಹುಬ್ಬಳ್ಳಿಯಲ್ಲಿ ನಡೆಯಲಿದೆ ಎಂದು ಕೃಷ್ಣೋಜಿರಾವ್ ಸಾವಂತ್ (9342514779) ತಿಳಿಸಿದ್ದಾರೆ.

## ನಗರದಲ್ಲಿ ಅಪರಿಚಿತ ಮಹಿಳೆ ಶವ ಪತ್ತೆ

ದಾವಣಗೆರೆ, ಡಿ.1- ಮಹಾನಗರ ಪಾಲಿಕೆ ರಂಗ ಮಂದಿರದ ಪಕ್ಕ ಪಾಲಿಕೆ ಗುತ್ತಿಗೆದಾರರ ಸಂಘದ ಕಛೇರಿಯ ಹಿಂಭಾಗದ ಬಳಿ ಮೊನ್ನೆ ಸುಮಾರು 50 ವರ್ಷ ವಯಸ್ಸಿನ ಮಹಿಳೆ ಮೃತ ದೇಹ ಸಿಕ್ಕಿದೆ. ಮೃತಳ ತಲೆಯ ಹಿಂಭಾಗ ಗಾಯವಾದಂತೆ ಕೊಳೆತಿದ್ದು, ಹುಳುಗಳು ಹರಿದಾಡುತ್ತಿರುವುದು ಕಂಡುಬಂದಿರುತ್ತದೆ. ಡಿಸ್ಟೆಂಪರ್ ಕಲರ್ ಸೀರೆ, ನಶೆ ಕಲರ್ ಜಾಕೀಟು ಧರಿಸಿರುತ್ತಾಳೆ. ಸಂಬಂಧಪಟ್ಟವರು ಬಡಾವಣೆ ಪೊಲೀಸ್ ಠಾಣೆ (ದೂರವಾಣಿ : 08192-272012, 259213) ಯನ್ನು ಸಂಪರ್ಕಿಸಬಹುದು.

## ನಗರದಲ್ಲಿ ಅಪರಿಚಿತ ಪುರುಷನ ಶವ ಪತ್ತೆ

ದಾವಣಗೆರೆ, ಡಿ.1- ನಗರದ ಪ್ರವಾಸಿ ಮಂದಿರ ರಸ್ತೆಯಲ್ಲಿರುವ ಹಳೆ ಸಾಗರ ಬೆಣ್ಣೆದೋಸೆ ಹೋಟೆಲ್ ಬಳಿ ಮೊನ್ನೆ ಸುಮಾರು 55 ವರ್ಷ ವಯಸ್ಸಿನ ಪುರುಷನ ಮೃತ ದೇಹ ಸಿಕ್ಕಿದೆ.

ಮೃತನ ಮುಖದ ಮೇಲೆ ಕಪ್ಪು-ಬಿಳಿಪು ದಾಡಿ ಬೆಳೆದಿದ್ದು, ಮುಂದೆಲೆ ಬೊಕ್ಕತಲೆಯಾಗಿರುತ್ತದೆ. ತಲೆಯ ಹಿಂಭಾಗ ಗಾಯವಾಗಿರುತ್ತದೆ. ತುಂಬು ತೋಳಿನ ಮಾಸಲು ಕ್ರೀಂ ಕಲರ್ ಶರ್ಟ್, ಮಾಸಲು ಬೂದು ಬಣ್ಣದ ಪ್ಯಾಂಟ್ ಧರಿಸಿರುತ್ತಾನೆ. ಸಂಬಂಧಪಟ್ಟವರು ಬಡಾವಣೆ ಪೊಲೀಸ್ ಠಾಣೆ (ದೂರವಾಣಿ : 08192-272012, 259213)ಯನ್ನು ಸಂಪರ್ಕಿಸಬಹುದು.

# ಹರಿಹರ : ಹಾಳಾಗಿರುವ ರಸ್ತೆಗಳ ದುರಸ್ತಿಗೆ ಜಯ ಕರ್ನಾಟಕ ಆಗ್ರಹ



ಹರಿಹರ, ಡಿ. 1 - ನಗರದ ತುಂಗಭದ್ರಾ ನದಿಯ ಹತ್ತಿರದ ದರ್ಗಾ ಮುಂಭಾಗದ ರಸ್ತೆಯನ್ನು ದುರಸ್ತಿ ಪಡಿಸುವಂತೆ ಆಗ್ರಹಿಸಿ ಜಯಕರ್ನಾಟಕ ಸಂಘಟನೆಯ ವತಿಯಿಂದ ಐದು ದಿನಗಳಿಂದ ಸತತವಾಗಿ ಧರಣಿ ಸತ್ಯಾಗ್ರಹ ನಡೆಸಲಾಗುತ್ತಿದ್ದು, ಇಂದು ಪಿಡಬ್ಲ್ಯೂಡಿ ಕಚೇರಿಯ ಮುಂಭಾಗದ ರಸ್ತೆಯನ್ನು ಬಂದ್ ಮಾಡಿ ಪ್ರತಿಭಟನೆ ಮಾಡುವುದಕ್ಕೆ ಮುಂದಾಗಿದ್ದರಿಂದ ಸ್ಥಳಕ್ಕೆ ತಹಶೀಲ್ದಾರ್ ಬಸವರಾಜಯ್ಯ ಮತ್ತು ಲೋಕೋಪಯೋಗಿ ಇಲಾಖೆಯ ಕೆ.ಎನ್. ಶಿವಮೂರ್ತಿ ಆಗಮಿಸಿ ಪ್ರತಿಭಟನಕಾರರ ಬಳಿ ಚರ್ಚಿಸಿ ಮಂಗಳವಾರ ರಸ್ತೆಯನ್ನು ಸರ್ವೆ ಮಾಡಿಸಿ, ಅದರ ಸಾದಕ-ಭಾದಕಗಳನ್ನು ನೋಡಿಕೊಂಡು ತದನಂತರ ರಸ್ತೆಯನ್ನು ದುರಸ್ತಿ ಪಡಿಸುವುದಾಗಿ ಭರವಸೆಯನ್ನು ನೀಡಿದ್ದರಿಂದ ಪ್ರತಿಭಟನೆ ಮಾಡುವುದನ್ನು ಸ್ಥಗಿತಗೊಳಿಸಲಾಯಿತು.

ತಹಶೀಲ್ದಾರ್ ಬಸವರಾಜಯ್ಯ ಹಿರೇಮಠ ಮಾತನಾಡಿ, ಈ ರಸ್ತೆಯನ್ನು ದುರಸ್ತಿ ಪಡಿಸಲು ಸರ್ವೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು, ತದನಂತರ ಸರ್ವೆ ನೋಡಿಕೊಂಡು ಯಾವ ರೀತಿಯಲ್ಲಿ ರಸ್ತೆಯನ್ನು ಮಾಡಿದರೆ ಒಳಿತಾಗುತ್ತದೆ ಎಂಬುದನ್ನು ಎಲ್ಲರೂ ಸೇರಿ ಚರ್ಚಿಸಿ ನಿರ್ಧರಿಸಲು ಅನುಕೂಲವಾಗುತ್ತದೆ. ಅದನ್ನು ಬಿಟ್ಟು ಅಧಿಕಾರಿಗಳಿಗೆ ರಸ್ತೆಯನ್ನು ಸರ್ವೆ ಮಾಡುವುದಕ್ಕೆ ಬಿಡದೆ ಇದ್ದರೆ ಬಂದಿರುವ ಹಣ ವಾಪಸು ಹೋಗುತ್ತದೆ. ಅದಕ್ಕೆ ಅವಕಾಶ ಕೊಡದಿರುವಂತೆ ಕೇಳಿಕೊಂಡರು.

ಜಯಕರ್ನಾಟಕ ಸಂಘಟನೆಯ ಮುಖಂಡ ಗೋವಿಂದ ಮಾತನಾಡಿ, ನಗರದ ಕೆ.ಇ.ಬಿ. ಮುಂಭಾಗದ ಬೀರೂರು -ಸಮ್ಮಸಗಿ ರಾಜ್ಯ ಹೆದ್ದಾರಿ ತುಂಗಭದ್ರಾ ಹೊಸ ಸೇತುವೆ ಸಮೀಪದ ರಸ್ತೆಯು ಹದಗೆಟ್ಟಿದ್ದು, ಸಾರ್ವಜನಿಕರು ವಾಹನ ಸವಾರರಿಗೆ ಪ್ರತಿನಿತ್ಯ ಹಲವಾರು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಧರಣಿ ಸತ್ಯಾಗ್ರಹ ನಡೆಸಲಾಗುತ್ತಿದ್ದು, ಇಂದು ಪಿಡಬ್ಲ್ಯೂಡಿ ಇಲಾಖೆಯ ಮುಂಭಾಗದಲ್ಲಿ ವಾಹನಗಳ ತಡೆದು ಪ್ರತಿಭಟನೆ ಮಾಡಲಾಯಿತು. ಸ್ಥಳಕ್ಕೆ ಆಗಮಿಸಿದ ತಾಲ್ಲೂಕು ದಂಡಾಧಿಕಾರಿ ಗುರು ಬಸವರಾಜ್ ಹಾಗೂ ಪಿಡಬ್ಲ್ಯೂಡಿ ಇಂಜಿನಿಯರ್ ಶಿವಮೂರ್ತಿ ಮಾತನಾಡಿ, ಎರಡು ದಿನದೊಳಗಾಗಿ ರಸ್ತೆ ಕಾಮಗಾರಿ ಪ್ರಾರಂಭ ಮಾಡುತ್ತೇವೆ ಎಂದು ಭರವಸೆ ಕೊಟ್ಟಿದ್ದಾರೆ. ಮಂಗಳವಾರ ಅಳತೆ ಮಾಡದೇ ಇದ್ದಲ್ಲಿ ಹರಿಹರ ಬಂದ್‌ಗೆ ಕರೆ ಕೊಡುವುದಾಗಿ ಎಚ್ಚರಿಕೆ ನೀಡಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾರ್ಮಿಕ ಮುಖಂಡ ಹೆಚ್.ಕೆ. ಕೊಟ್ರಪ್ಪ, ಹೆಚ್ ನಿಜಗುಣ, ನಗರಸಭೆ ಸದಸ್ಯ ಮುಜಾಮಿಲ್ಲ್ ಬಿಲ್ಲು, ವಿ.ಎ.ಗಳಾದ ಹೇಮಂತ್ ಕುಮಾರ್, ಸಮೀರ್, ಪಿಎಸ್‌ಐ ಚಿದಾನಂದಪ್ಪ, ಎ. ಎಸ್.ಐ. ರಮೇಶ್, ಸತೀಶ್, ಜಯಕರ್ನಾಟಕ ಸಂಘಟನೆಯ ತಾಲ್ಲೂಕು ಅಧ್ಯಕ್ಷ ಗೋವಿಂದ್ ಉಪಾಧ್ಯಕ್ಷ, ಆನಂದ್ ಎಂ.ಆರ್ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಸಿ.ಎಚ್ ಸಂಘಟನಾ ಕಾರ್ಯದರ್ಶಿ ಮಧು ಎಂ ಪ್ರದೀಪ್ ಶಿವಶಕ್ತಿ, ಶಬರಿಶ, ವಿದ್ಯಾರ್ಥಿ ಘಟಕದ ಅಧ್ಯಕ್ಷರಾದ ಶ್ರೀನಿವಾಸ್, ಕಾರ್ತಿಕ್, ಪಾಂಡು, ಪ್ರವೀಣ್, ಚರಣ್, ಕುಮಾರ್, ಪ್ರಜ್ವಲ್, ರೋಹಿತ್, ನಿಹಾರ್, ವೀರೇಶ್, ರಾಜು ಗಾಂದಿನಗರ್, ಮಂಜುನಾಥ್ ಬುದನೂರು, ಪರಶುರಾಮ್ ಸಾಲಕಟ್ಟಿ, ಪ್ರಶಾಂತ್ ಕರೂರ್, ಪಚ್ಚಿ, ರಮೇಶ್, ಮಾಂತೇಶ್, ರುದ್ರಪ್ಪ, ಅಂಜಿನಿ, ಪ್ರವೀಣ್, ಕೆ.ಉಪಸ್ಥಿತರಿದ್ದರು.

# ಪ್ರಗತಿ ತೋರಿದ ಮೋದಿ-ಮನಮೋಹನ್

**(1ನೇ ಪುಟದಿಂದ)** ಯೋಜನೆಯ ಮೂಲಕ 51 ಕೋಟಿ ಜನರು ಬ್ಯಾಂಕ್ ಖಾತೆ ತೆರೆಯುವಂತೆ ಮಾಡಿದರು. ಈಗಿನ ರಾಜ್ಯ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲು ಸಾಧ್ಯವಾಗಿದ್ದೇ ಜನ್ ಧನ್ ಯೋಜನೆ ಕಾರಣದಿಂದ ಎಂದು ರೇಷ್ಮೆ ತಿಳಿಸಿದರು.

ಜನ್ ಧನ್, ಆಧಾರ್ ಹಾಗೂ ಮೊಬೈಲ್ ತಂತ್ರಜ್ಞಾನದ ಮೂಲಕ ಯು.ಪಿ.ಐ. ಕಾರ್ಯ ನಿರ್ವಹಿಸುತ್ತಿದೆ. ಇದರಿಂದಾಗಿ ವಿಶ್ವದಲ್ಲೇ ಅತಿ ಹೆಚ್ಚಿನ ಡಿಜಿಟಲ್ ವಹಿವಾಟು ಭಾರತದಲ್ಲಿ ನಡೆಯುತ್ತಿದೆ ಎಂದವರು ಹೇಳಿದರು.

ನೋಟು ರದ್ದತಿಯ ಸರ್ಜಿಕಲ್ ಸ್ಟ್ರೈಕ್ ಬೆನ್ನಲ್ಲೇ, ರಿಯಲ್ ಎಸ್ಟೇಟ್ ನಿಯಂತ್ರಣದ ರೇರಾ ಕಾಯ್ದೆ, ಅಕ್ರಮ ಹಣ ತಡೆ ಕಾಯ್ದೆ, ಬೇನಾಮಿ ಆಸ್ತಿ ನಿಗ್ರಹ ಕಾಯ್ದೆ ಹಾಗೂ ದಿವಾಳಿ ಸಂಹಿತೆಗಳನ್ನು ಜಾರಿಗೆ ತರಲಾಯಿತು. ಈ ಕಾಯ್ದೆಗಳೆಲ್ಲವೂ ನೋಟು ರದ್ದತಿಗೆ ಪೂರಕವಾಗಿದ್ದವು. ಇದರಿಂದ ಅಕ್ರಮ ಹಣದ ಮೇಲೆ ದೊಡ್ಡ ಪ್ರಮಾಣದ ಕಡಿವಾಣ ಬಿದ್ದಿದೆ ಎಂದವರು ಹೇಳಿದರು.

ಸಿಂಗ್ ಹಾಗೂ ಮೋದಿ ಅವರಿಬ್ಬರೂ ಅನಿರೀಕ್ಷಿತವಾಗಿ ರಾಜಕೀಯ ಹುದ್ದೆಗೆ ಬಂದವರು. ಪಕ್ಷಗಳು ಅದುವರೆಗೂ ಹಾಕಿಕೊಟ್ಟ ಸಿದ್ಧಾಂತದ ಚೌಕಟ್ಟುಗಳನ್ನು ಮೀರಿದ ಆಡಳಿತ ನೀಡಿದರು. ಸಿಂಗ್ ಅವರು ಅದುವರೆಗಿನ ಕಾಂಗ್ರೆಸ್ ಸರ್ಕಾರದ ಸಮಾಜವಾದಿ ಸಿದ್ಧಾಂತವನ್ನು ದಾಟಿ ಮುನ್ನಡೆದರು. ಮೋದಿ ಜಾತಿ ಭೇದಗಳನ್ನು ಮೀರಿ ಜನಪ್ರಿಯತೆ ಸಾಧ್ಯ ಎಂಬುದನ್ನು ತೋರಿಸಿದರು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜಯರತ್ನ ಕಲ್ಯಾಣ ಕೇಂದ್ರದ ಟ್ರಸ್ಟ್ ಸಂಚಾಲಕ ಚಿನ್ಮಯ ಪಿ. ಚಿಗಟೇರಿ, ಭಾರತದಲ್ಲಿ ಮಾನವಿಕ ಅಧ್ಯಯನಕ್ಕೆ ಹೆಚ್ಚು ಪ್ರೋತ್ಸಾಹ ಸಿಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಮಾನವಿಕ ವಿಷಯಗಳ ಅಧ್ಯಯನಕ್ಕೆ ಉತ್ತೇಜನ ನೀಡಲು ಟ್ರಸ್ಟ್ ಮೂಲಕ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದರು.

ಕಾರ್ಯಕ್ರಮದ ವೇದಿಕೆ ಮೇಲೆ ಪರಿಷತ್ ಸದಸ್ಯ ಕೆ. ನವೀನ್, ಹಿರಿಯ ಪತ್ರಕರ್ತ ರವೀಂದ್ರ ರೇಷ್ಮೆ, ದಾವಣಗೆರೆ ವಿ.ವಿ. ಕುಲಪತಿ ಪ್ರೊ. ಬಿ.ಡಿ. ಕುಂಬಾರ್, ರಿಜಿಸ್ಟ್ರಾರ್ ಬಿ.ಬಿ. ಸರೋಜ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಉಪಾಧ್ಯಕ್ಷ ಕೊಂಡಜ್ಜಿ ಬಿ. ಷಣ್ಮುಖಪ್ಪ, ಎಂ.ಬಿ.ಎ. ಕಾಲೇಜಿನ ನಿರ್ದೇಶಕ ಸ್ವಾಮಿ ತ್ರಿಭುವಾನಂದ, ಜಯರತ್ನ ಕಲ್ಯಾಣ ಕೇಂದ್ರ ಮ್ಯಾನೇಜಿಂಗ್ ಟ್ರಸ್ಟೀ ಪ್ರಭುದೇವ ಚಿಗಟೇರಿ, ಶಾಂತ ಯಾವಗಲ್ ಮತ್ತಿತರರು ಉಪಸ್ಥಿತರಿದ್ದರು.

### ರಾಜಕೀಯದಲ್ಲಿ ಕುಟುಂಬ, ಉದ್ಯಮಗಳಲ್ಲಿ ಸಮಾಜ

ಮನಮೋಹನ್ ಸಿಂಗ್ ಅವರು ಭಾರತದಲ್ಲಿ ಹೊಸ ಆರ್ಥಿಕತೆ ಜಾರಿಗೆ ತಂದ ನಂತರ ಕೈಗಾರಿಕೋದ್ಯಮಗಳಲ್ಲಿ ಅಪಾರ ಬದಲಾವಣೆಯಾಗಿದೆ. ಕಾರ್ಪೊರೇಟ್ ಸಂಸ್ಥೆಗಳ ಆಡಳಿತ ಕುಟುಂಬದಿಂದ ಹೊರ ಬಂದು ಸಮಾಜದ ಕೈ ಸೇರಿದೆ. ಇದಕ್ಕೆ ಟಾಟಾ ಸಮೂಹ, ಟಿ.ಸಿ.ಎಸ್. ಹಾಗೂ ಇನ್ಫೋಸಿಸ್‌ಗಳೇ ಉದಾಹರಣೆ ಎಂದು ಪತ್ರಕರ್ತರ ರವೀಂದ್ರ ರೇಷ್ಮೆ ಹೇಳಿದರು.

ಆದರೆ, ಇದೇ ವೇಳೆ ಪಕ್ಷದ ಆಡಳಿತದ ಚುಕ್ಕಾಣಿ ಕುಟುಂಬಗಳ ಕೈ ಸೇರುತ್ತಿದೆ. ಪಕ್ಷಗಳನ್ನು ಕೆಲ ನಿರ್ದಿಷ್ಟ ಕುಟುಂಬಗಳೇ ನಡೆಸುತ್ತಿದೆ ಎಂದವರು ವಿಷಾದಿಸಿದರು.

### ವಿರೋಧಿಗಳು ಮೆಚ್ಚಿದರು, ಪಕ್ಷದವರು ಮರೆತರು

**(1ನೇ ಪುಟದಿಂದ)** ವರ್ಗದವರ ಸಂಖ್ಯೆ 18 ಕೋಟಿಯಿಂದ 36 ಕೋಟಿಗೆ ಏರಿಕೆಯಾಯಿತು. ಇದು ದೇಶದ ಬೆಳವಣಿಗೆಗೆ ಕಾರಣವಾಯಿತು ಎಂಬುದನ್ನು ಜೇಟ್ಲಿ ಪ್ರಮುಖವಾಗಿ ಪ್ರಸ್ತಾಪಿಸಿದ್ದರು ಎಂದು ರೇಷ್ಮೆ ತಿಳಿಸಿದರು.

# ದಾಸ ಸಾಹಿತ್ಯ ಸರ್ವ ಶ್ರೇಷ್ಠವಾದದ್ದು



### ಚನ್ನಗಿರಿ : ಕಸಾಪ ಕಾರ್ಯಕ್ರಮದಲ್ಲಿ ಜನಪದ ಕಲಾವಿದ ಎಂ.ಬಿ.ಜಯಪ್ಪ

ಚನ್ನಗಿರಿ, ಡಿ. 1 - ದಾಸ ಸಾಹಿತ್ಯದಲ್ಲಿ ಸಮಾನತೆಯ ಸಮಾಜದ ಧೋರಣೆ, ಸಾಮಾಜಿಕ ಕಳಕಳಿ, ಲೋಕ ವಿಮರ್ಶೆ, ಸಾಮಾಜಿಕ ಚಿಂತನೆ ಮತ್ತು ವೈಚಾರಿಕ ಮನೋಭಾವನೆಗಳು ಕಂಡು ಬರುವುದರಿಂದ ದಾಸ ಸಾಹಿತ್ಯವನ್ನು ಸರ್ವಶ್ರೇಷ್ಠ ಎಂದು ಪರಿಗಣಿಸಲಾಗಿದೆ ಎಂದು ಜನಪದ ಕಲಾವಿದ ಎಂ.ಬಿ.ಜಯಪ್ಪ ತಿಳಿಸಿದರು.

ತಾಲ್ಲೂಕಿನ ಬಸವಾಪಟ್ಟಣದ ಜನತಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಚನ್ನಗಿರಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಇಂದು ಆಯೋಜಿಸಿದ್ದ ದತ್ತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದಾಸ ಶ್ರೇಷ್ಠರುಗಳು ತಮ್ಮ ಕೀರ್ತನೆಗಳ ಮೂಲಕ ಜನರ ನಡವಳಿಕೆ, ಸಮಾಜದಲ್ಲಿ ಬೇರುಬಿಟ್ಟ ರೂಢಿಗತ ಸಂಪ್ರದಾಯಗಳು, ಜಾತಿ ವ್ಯವಸ್ಥೆ, ಬಡವ ಬಲ್ಲಿದ, ಮೇಲು-ಕೀಳೆಂಬ ತಾರತಮ್ಯಗಳು, ಬದುಕಿನ ಆಡಂಬರ ಮೊದಲಾದ ವಿಚಾರಗಳನ್ನು ವಿಮರ್ಶೆಗೆ ಒಳಪಡಿಸಿದ್ದರು ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಲ್.ಜಿ.ಮಧುಕುಮಾರ್ ಪರಿಷತ್ತು ನಡೆದು ಬಂದ ದಾರಿ ಹಾಗೂ ದತ್ತಿ ಕಾರ್ಯಕ್ರಮಗಳ ಮಹತ್ವವನ್ನು ತಿಳಿಸಿದರು.

ಕಾಲೇಜು ಪ್ರಾಂಶುಪಾಲ ಎಂ.ಆರ್. ಲೋಕೇಶ್ ಮಾತನಾಡಿ, ವ್ಯಕ್ತಿಯ ಪರಿಪೂರ್ಣ ವಿಕಸನಕ್ಕೆ ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯದ ಅಧ್ಯಯನದ ಅಗತ್ಯವಿದೆ ಎಂದರು. ಕಾರ್ಯಕ್ರಮದಲ್ಲಿ ಡಾ.ಬಿ.ಎನ್. ರಂಗಪ್ಪ, ಕುಸುಮ ರಂಗಪ್ಪ, ಬಿ.ಜಿ. ಅಮಿತ್, ಪ್ರಾಧ್ಯಾಪಕರುಗಳಾದ ಪ್ರಕಾಶ್, ಎ.ಡಿ.ಬಸವರಾಜ್, ಯೋಗೇಶ್, ಓಬಳೇಶ್, ಗೋವಿಂದ ರೆಡ್ಡಿ, ಕರಿಬಸಪ್ಪ ಮತ್ತಿತರರು ಹಾಜರಿದ್ದರು.

# ಧರ್ಮಸ್ಥಳ ಗ್ರಾಮಾಭಿವೃದ್ಧಿಯಿಂದ ಲಕ್ಷ್ಮಿಪೂಜೆ



ದಾವಣಗೆರೆ, ಡಿ. 1- ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ದಾವಣಗೆರೆ ಗ್ರಾಮಾಂತರ ಪ್ರಗತಿಬಂಧು ಸ್ವಸಹಾಯ ಸಂಘಗಳ ಒಕ್ಕೂಟ, ಬೇತೂರು ರೋಡ್ ವಲಯ ಇವರ ಸಹಯೋಗದಲ್ಲಿ ಬೇತೂರು ರಸ್ತೆಯ ಶ್ರೀ ವೆಂಕಟೇಶ್ವರ ಸಮುದಾಯ ಭವನದಲ್ಲಿ ಸಾಮೂಹಿಕ ಶ್ರೀ ಮಹಾಲಕ್ಷ್ಮಿ ಪೂಜೆ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮ ನಡೆಯಿತು.

ಒಕ್ಕೂಟದ ಅಧ್ಯಕ್ಷರಾದ ನಾಗರತ್ನಮ್ಮ ಆನೆಕೊಂಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಾಮೂಹಿಕ ಶ್ರೀ ಮಹಾಲಕ್ಷ್ಮಿ ಪೂಜಾ ಕಾರ್ಯಕ್ರಮದ ದೀಪವನ್ನು ಜಿಲ್ಲಾ ನಿರ್ದೇಶಕ ಎಂ. ಲಕ್ಷ್ಮಣ್ ಬೆಳಗಿಸಿದರು.

ಜಿಲ್ಲಾ ಜನ ಜಾಗೃತಿ ವೇದಿಕೆಯ ನಿಕಟಪೂರ್ವ ಅಧ್ಯಕ್ಷ ಎಂ.ಬಿ. ನಾಗರಾಜ್ ಕಾಕನೂರು ಉಪನ್ಯಾಸ ನೀಡಿ, ಗ್ರಾಮ ಸುಭಿಕ್ಷೆಗಾಗಿ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಹಾಗೂ ಮಹಿಳೆಯರು ಸಂಸ್ಕಾರ ಮತ್ತು ಸಂಸ್ಕೃತಿಯಿಂದ ಮಕ್ಕಳನ್ನು ಬೆಳೆಸಬೇಕು ಎಂದು ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಶ್ರೀಮತಿ ಶಿವಲೀಲಾ ಕೊಟ್ರೇಶಯ್ಯ, ಜಿಲ್ಲಾ ಅಲ್ಪ ಸಂಖ್ಯಾತರ ಉಪಾಧ್ಯಕ್ಷರಾದ ಸೈಯದ್ ಆರೀಫ್, ತಾಲ್ಲೂಕು ಕಸಾಪ ನಿರ್ದೇಶಕ ಎಂ. ಷಡಕ್ಷರಪ್ಪ ಬೇತೂರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಬೇತೂರು ರೋಡ್ ವಲಯದ ಯೋಜನಾಧಿಕಾರಿ ಶ್ರೀಮತಿ ಯಶೋಧ ಸ್ವಾಗತಿಸಿದರು. ಶ್ರೀಮತಿ ಜಯಶ್ರೀ ಪ್ರಾರ್ಥಿಸಿದರು. ಮೇಲ್ವಿಚಾರಕ ಕೃಷ್ಣ ನಿರೂಪಿಸಿದರು. ಶ್ರೀಮತಿ ದ್ಯಾಮಕ್ಕ ಮಂಜುನಾಥ ವಂದಿಸಿದರು.

## ಬೆಣ್ಣೆದೋಸೆ ಹೋಟೆಲ್‌ಗಳಿಗೆ ಪ್ರಮಾಣ ಪತ್ರ

**(1ನೇ ಪುಟದಿಂದ)** ಪತ್ರ ನೀಡಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಪಾಲಿಕೆ ಆಯುಕ್ತರು, ಆಹಾರ ಸುರಕ್ಷತಾ ಕಾಯಿದೆ ಅಂಕಿತ ಅಧಿಕಾರಿಗಳು, ಸ್ಮಾರ್ಟ್‌ಸಿಟಿ ವ್ಯವಸ್ಥಾಪಕ ನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕರನ್ನು ಒಳಗೊಂಡ ಸಮಿತಿ ರಚಿಸಿ ಅಧ್ಯಯನ ವರದಿ ನೀಡಲು ತಿಳಿಸಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ಹೇಳಿದರು.

# 'ಪ್ಯಾಲೆಸ್ತೇನ್' ನಾಟಕಕ್ಕೆ ಪೊಲೀಸರ ತಡೆ : ಅಭಿವ್ಯಕ್ತಿಗೆ ಅಡ್ಡಿಯಿಲ್ಲ ಎಂದ ಸಿದ್ದರಾಮಯ್ಯ

ಬೆಂಗಳೂರು, ಡಿ. 1 - ನಗರದ ರಂಗಶಂಕರದಲ್ಲಿ ನಡೆಯಬೇಕಿದ್ದ 'ಪ್ಯಾಲೆಸ್ಟೀನ್' ಕುರಿತಾದ ಕವನ ವಾಚನ, ಕಿರು ನಾಟಕಗಳ ಪ್ರದರ್ಶನಕ್ಕೆ ಪೊಲೀಸರು ತಡೆಯೊಡ್ಡಿದ್ದಾರೆ.

ಗಾಯಕಿ ಎಂ.ಡಿ. ಪಲ್ಲವಿ, ಶ್ವೇತಾಂಶು ಬೋರಾ, ರಾಮ್ನೀಕ್ ಸಿಂಗ್ ನೇತೃತ್ವದಲ್ಲಿ 'ಪ್ಯಾಲೆಸ್ಟೀನ್' ಕುರಿತಾದ ಕವನ ವಾಚನ, ಕಿರು ನಾಟಕಗಳ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿತ್ತು. ಆದರೆ, ಭದ್ರತಾ ಕಾರಣಗಳಿಂದಾಗಿ ಪೊಲೀಸರು ಕಾರ್ಯಕ್ರಮಕ್ಕೆ ಅನುಮತಿ ನೀಡಿರಲಿಲ್ಲ.

ಕಾರ್ಯಕ್ರಮ ರದ್ದಾದ ಬೆನ್ನಲ್ಲೇ ಗಣ್ಯರು ಪೊಲೀಸರು ಮತ್ತು ಸರ್ಕಾರದ ವಿರುದ್ಧ ಅಸಮಾಧಾನ ಹೊರಹಾಕಿದ್ದರು. ಈ ಘಟನೆ ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆಗೆ ಗ್ರಾಸವಾಗಿತ್ತು.

ಇದರ ಬೆನ್ನಲ್ಲೇ ಹೇಳಿಕೆ ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಕಥೆ, ಕಾವ್ಯ, ನಾಟಕ, ಸಂಗೀತ ಮುಂತಾದ ಸೃಜನಶೀಲ ಅಭಿವ್ಯಕ್ತಿಯನ್ನು ಯಾವುದೇ ಕಾರಣಕ್ಕೂ ತಡೆಯುವ ಕೆಲಸ ಮಾಡುವುದಿಲ್ಲ ಎಂದಿದ್ದಾರೆ.

ಈ ಸಂಬಂಧ ಪ್ರಕಟಣೆ ನೀಡಿರುವ ಅವರು, ಸಂವಿಧಾನದ ಮೂಲ ಸ್ಫೂರ್ತಿಗೆ ವಿರುದ್ಧವಾಗದಂತೆ ನಡೆಯುವ ಎಲ್ಲಾ ಅಭಿವ್ಯಕ್ತಿಗಳ ಪರವಾಗಿದ್ದೇವೆ. ಕೆಳಹಂತದ ಪೊಲೀಸ್ ಅಧಿಕಾರಿಗಳ ತಪ್ಪು ತಿಳುವಳಿಕೆಯಿಂದಾಗಿ ಒಂದೆರಡು ಅನಾವಶ್ಯಕ ಗೊಂದಲಗಳು ನಿರ್ಮಾಣವಾಗಿವೆ. ಈ ಬಗ್ಗೆ ಯಾವುದೇ ಗೊಂದಲಗಳು ಸೃಷ್ಟಿಯಾಗದಂತೆ ಗಮನ ಹರಿಸುವಂತೆ ಪೊಲೀಸ್ ಮಹಾನಿರ್ದೇಶಕರಿಗೆ ಸೂಕ್ತ ಸೂಚನೆಗಳನ್ನು ನೀಡಿರುವುದಾಗಿ ತಿಳಿಸಿದ್ದಾರೆ.

## ಸಿ.ಬಿ.ಎಸ್.ಇ. ಪರೀಕ್ಷೆಗೆ ದರ್ಜೆ, ಡಿಸ್ಟಿಂಕ್ಷನ್ ಇಲ್ಲ

**(1ನೇ ಪುಟದಿಂದ)** ಹೇಳಿದ್ದಾರೆ. ಮಂಡಳಿಯು ಒಟ್ಟು ಅಂಕ ಇಲ್ಲವೇ ಶೇಕಡಾವಾರು ಅಂಕಗಳನ್ನೂ ತಿಳಿಸುವುದಿಲ್ಲ. ಉದ್ಯೋಗ ಇಲ್ಲವೇ ಉನ್ನತ ಶಿಕ್ಷಣಕ್ಕಾಗಿ ಶೇಕಡಾವಾರು ಅಂಕ ಅಗತ್ಯವಿರುವವರು, ಅವರೇ ಲೆಕ್ಕ ಹಾಕಿಕೊಳ್ಳಬೇಕು ಎಂದವರು ತಿಳಿಸಿದ್ದಾರೆ.

## ಇಂದು ಮಕ್ಕಳಿಗಾಗಿ ವಿವಿಧ ಸ್ಪರ್ಧೆ

ಮಕ್ಕಳ ದಿನಾಚರಣೆ ಹಿನ್ನೆಲೆಯಲ್ಲಿ ಜಿಲ್ಲಾ ಬಾಲಭವನ ಸೊಸೈಟಿ ವತಿಯಿಂದ ನಗರದ ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿರುವ ಆವರಣದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಮಕ್ಕಳಿಗಾಗಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.

ಮಕ್ಕಳ ದಿನಾಚರಣೆ ಹಿನ್ನೆಲೆಯಲ್ಲಿ ಚಿತ್ರಕಲೆ, ಜಾನಪದ ನೃತ್ಯ (ಗ್ರೂಪ್ ಡಾನ್ಸ್), ದೇಶ ಭಕ್ತಿಗೀತೆ ಹಾಗೂ ಮೆಮೋರಿ ಆಟ ಇತರೆ ಸ್ಪರ್ಧೆಗಳನ್ನು ಆಯೋಜಿಸಲಾಗಿದ್ದು, 6 ರಿಂದ 16 ವರ್ಷದೊಳಗಿನ ಮಕ್ಕಳು ಮಾತ್ರ ಭಾಗವಹಿಸಬಹುದಾಗಿದೆ. ವಿವರಕ್ಕೆ ದೂ.ಸಂ. 9964496242 ಸಂಪರ್ಕಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ವಾಸಂತಿ ಉಪ್ಪಾರ್ ತಿಳಿಸಿದ್ದಾರೆ.

## ಗೋಣಿವಾಡದ ಪ್ರಕಾಶ್ ಜಿ.ಕೆ ನಿಧನ



ದಾವಣಗೆರೆ ತಾಲ್ಲೂಕು ಗೋಣಿವಾಡ ಗ್ರಾಮದ ಶ್ರೀಮತಿ ಕಲ್ಲಮ್ಮ ಜಿ. ಶ್ರೀ ಕೊಟ್ರಪ್ಪ ಇವರ ದ್ವಿತೀಯ ಪುತ್ರ

**ಪ್ರಕಾಶ್ ಜಿ.ಕೆ**

ಇವರು ದಿನಾಂಕ 02.12.2023ರ ಶನಿವಾರ ಬೆಳಗಿನಜಾವ 2.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 02.12.2023ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಗೋಣಿವಾಡದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತರು : ಪತ್ನಿ : ಶ್ರೀಮತಿ ಲತಾ ಟಿ.ಎನ್.**
**ಪುತ್ರರಾದ : ಚೇತನ ಕುಮಾರ್ ಜಿ.ಪಿ, ತನ್ಮಯ ಜಿ.ಪಿ,**
**ಸಹೋದರ ಶ್ರೀಮತಿ ಶ್ರೀ ಕೆಂಚಪ್ಪ ಜಿ.ಕೆ,**
**ಗೌಡ್ರ ವಂಶಸ್ಥರು, ಗೋಣಿವಾಡ. ಮೊ : 94480 70906**

# ಲಯನ್ಸ್ ಜಿಲ್ಲೆಯಲ್ಲಿ 'ಬೆಳಕು' ಸೇವಾ ಕಾರ್ಯಕ್ರಮಗಳು ಜಾರಿಗೆ



### ಮಲೇಬೆನ್ನೂರಿನಲ್ಲಿ ಲಯನ್ಸ್ ಗೌರ್ನರ್ ಡಾ. ಮೇರಿಕಾರ್ನ್‌ನೆಲಿಯೇ

ಮಲೇಬೆನ್ನೂರು, ಡಿ.1- ಲಯನ್ಸ್ ಜಿಲ್ಲೆ 324-ಡಿ4 ರಲ್ಲಿ ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ ಮತ್ತು ಉಡುಪಿ ಕಂದಾಯ ಜಿಲ್ಲೆಗಳಿದ್ದು, 118 ಕ್ಲಬ್‌ಗಳು ಮತ್ತು 3143 ಲಯನ್ಸ್ ಸದಸ್ಯರಿದ್ದಾರೆ ಎಂದು ಲಯನ್ಸ್ ಜಿಲ್ಲಾ ಗೌರ್ನರ್ ಡಾ. ಮೇರಿಕಾರ್ನ್‌ನೆಲಿಯೋ ತಿಳಿಸಿದರು.

ಗುರುವಾರ ಪಟ್ಟಣದ ಲಯನ್ಸ್ ಕ್ಲಬ್‌ಗೆ ತಮ್ಮ ಅಧಿಕೃತ ಭೇಟಿ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಜಗತ್ತಿನ 210 ಕ್ಕೂ ಹೆಚ್ಚು ದೇಶಗಳಲ್ಲಿ 47 ಸಾವಿರ ಕ್ಲಬ್‌ಗಳನ್ನು ಮತ್ತು 14 ಲಕ್ಷ ಸದಸ್ಯರನ್ನು ಹೊಂದಿರುವ ಲಯನ್ಸ್ ಅಂತರರಾಷ್ಟ್ರೀಯ ಸಂಸ್ಥೆಯು ವಿಶ್ವಸಂಸ್ಥೆಯಿಂದ ಮಾನ್ಯತೆ ಪಡೆದಿರುವ ಏಕೈಕ ಸೇವಾ ಸಂಸ್ಥೆಯಾಗಿದೆ.

ಭಾರತದಲ್ಲೇ ಅತಿ ಹೆಚ್ಚು ಸದಸ್ಯರನ್ನು ಹೊಂದಿರುವ ಲಯನ್ಸ್ ಸಂಸ್ಥೆಯು ಅಂಧತ್ವ ನಿವಾರಣೆ, ಪರಿಸರ ಸಂರಕ್ಷಣೆ, ಶಿಕ್ಷಣ, ರಕ್ತದಾನ ಶಿಬಿರ, ಗ್ರಾಮೀಣಾಭಿವೃದ್ಧಿಗೆ ಒತ್ತು ನೀಡಿ ಕೆಲಸ ಮಾಡುತ್ತಾ ಬಂದಿದೆ.

ನಾವು ಈ ವರ್ಷ ಲಯನ್ಸ್ ಜಿಲ್ಲೆ 324-ಡಿ4ರಲ್ಲಿ 'ಬೆಳಕು' ಎಂಬ ಹೆಸರಿನಡಿ ವಿವಿಧ ಸೇವಾ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಅಂಧತ್ವ, ರಕ್ತದಾನ ಶಿಬಿರ, ಪರಿಸರ ಕಾಳಜಿ, ಶಿಕ್ಷಣದ ಜೊತೆಗೆ ಹದಿಹರೆಯದ ಮಕ್ಕಳಿಗೆ ಕಾನೂನಿನ ಅರಿವು ಮೂಡಿಸುವುದು ಮತ್ತು ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಸಹಕಾರ, ಕನ್ನಡದ ಏಳಿಗೆಗೆ ವಿಶೇಷ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ.

ಜೊತೆಗೆ ವಿವಿಧತೆಯಲ್ಲಿ ಏಕತೆ ಹಾಗೂ ದುರ್ಬಲರ ಏಳಿಗೆಗಾಗಿ ವಿಶೇಷ ಆದ್ಯತೆ ನೀಡಿ ಕೆಲಸ ಮಾಡುತ್ತಿದ್ದೇವೆ.

ಈ ನಿಟ್ಟಿನಲ್ಲಿ ಮಲೇಬೆನ್ನೂರು ಲಯನ್ಸ್ ಕ್ಲಬ್ ಕಳೆದ 44 ವರ್ಷಗಳಿಂದ ನಿರಂತರ ಸೇವೆ ಮೂಲಕ ಲಯನ್ಸ್ ಜಿಲ್ಲೆಯಲ್ಲಿ ಅತ್ಯುತ್ತಮ ಕ್ಲಬ್ ಆಗಿ ಕೆಲಸ ಮಾಡುತ್ತಿದ್ದು, ಈ ಕ್ಲಬ್‌ನ ಡಾ. ಟಿ. ಬಸವರಾಜ್ ಅವರು ಲಯನ್ಸ್ ಜಿಲ್ಲಾ ಗೌರ್ನರ್ ಆಗಿ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ, ಓ.ಜಿ. ರುದ್ರಗೌಡ್ರು ಲಯನ್ಸ್ ಜಿಲ್ಲೆಯ ಸಂಪುಟ ಕಾರ್ಯದರ್ಶಿ ಹಾಗೂ ಖಜಾಂಚಿ ಆಗಿಯೂ ಕಾರ್ಯ ನಿರ್ವಹಿಸಿದ್ದಾರೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ದಾವಣಗೆರೆ ಮತ್ತು ಉಡುಪಿ ಜಿಲ್ಲೆಗಳಲ್ಲಿ ರಕ್ತನಿಧಿ ಕೇಂದ್ರಗಳನ್ನು ಸ್ಥಾಪಿಸಿ, ಕಳೆದ 4 ತಿಂಗಳಲ್ಲಿ 6600 ಯೂನಿಟ್ ರಕ್ತದಾನ ಮಾಡಿದ್ದೇವೆ.

ಚಳ್ಳಕೆರೆಯ ಸರ್ಕಾರಿ ಆಸ್ಪತ್ರೆಗೆ 12 ಲಕ್ಷ ರೂ. ವೆಚ್ಚದ ಡಯಾಲಿಸಿಸ್ ಘಟಕ ನೀಡಿದ್ದೇವೆ ಎಂದು ಡಾ. ಮೇರಿಕರ್ನ್‌ನೆಲಿಯೋ ತಿಳಿಸಿದರು.

ಇದೇ ವೇಳೆ ಬಸಾಪುರದ ಗುರಯ್ಯ ಅವರು ಲಯನ್ಸ್ ಶಾಲೆ 12 ಡೆಸ್ಕ್‌ಗಳನ್ನು ಕೊಡುಗೆಯಾಗಿ ನೀಡಿದರು.

ಲಯನ್ಸ್ ಮಾಜಿ ಗೌರ್ನರ್ ಡಾ. ಟಿ. ಬಸವರಾಜ್, ಲಯನ್ಸ್ ಕ್ಲಬ್ ಅಧ್ಯಕ್ಷ ಚಿಟ್ಟಕ್ಕಿ ನಾಗರಾಜ್, ಕಾರ್ಯದರ್ಶಿ ಸಿರಿಗೆರೆ ಸಿದ್ದಪ್ಪ, ಖಜಾಂಚಿ ಭರ್ಮಪ್ಪ ಮಂಜುನಾಥ್, ಲಯನ್ಸ್ ಸಂಪುಟ ಕಾರ್ಯದರ್ಶಿ ರವಿರಾಜ್ ನಾಯಕ್, ಮಾಜಿ ಅಧ್ಯಕ್ಷರಾದ ಓ.ಜಿ. ರುದ್ರಗೌಡ್ರು, ಎನ್.ಜಿ. ಶಿವಾಜಿ ಪಾಟೀಲ್, ಎನ್. ಶಿವನಗೌಡ್ರು, ಎನ್.ಜಿ. ಬಸವನಗೌಡ್ರು, ಶ್ರೀಮತಿ ರೂಪಾ ಪಾಟೀಲ್, ಉಡೇದರ್ ಸಿದ್ದೇಶ್, ಲಯನ್ಸ್ ಶಾಲಾ ಮುಖ್ಯಶಿಕ್ಷಕ ಚಂದ್ರಶೇಖರ್, ಸುದ್ಧಿಗೋಷ್ಠಿಯಲ್ಲಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಆಸ್ಟ್ರೇಲಿಯಾ ವಿರುದ್ಧದ ಟಿ20 ಸರಣಿ ಗೆದ್ದ ಭಾರತ**
ರಾಯಪುರ : ಆಸ್ಟ್ರೇಲಿಯಾ ವಿರುದ್ಧದ ನಾಲ್ಕನೇ ಟಿ20 ಪಂದ್ಯದಲ್ಲಿ ಭಾರತ 20 ರನ್‌ಗಳ ಜಯ ಸಾಧಿಸಿದೆ. ಇದರೊಂದಿಗೆ ಐದು ಪಂದ್ಯಗಳ ಸರಣಿಯನ್ನು ಭಾರತ ತನ್ನದಾಗಿಸಿಕೊಂಡಿದೆ. ಮೊದಲು ಬ್ಯಾಟ್ ಮಾಡಿದ ಭಾರತ ಒಂಭತ್ತು ವಿಕೆಟ್ ನಷ್ಟಕ್ಕೆ 174 ರನ್ ಗಳಿಸಿತ್ತು. ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ ಏಳು ವಿಕೆಟ್ ನಷ್ಟಕ್ಕೆ 154 ರನ್ ಮಾತ್ರ ಗಳಿಸಲು ಸಾಧ್ಯವಾಯಿತು.

**ನವೆಂಬರ್‌ನಲ್ಲಿ 1.68 ಲಕ್ಷ ಕೋಟಿ ರೂ. ಜಿಎಸ್‌ಟಿ**
ನವದೆಹಲಿ : ನವೆಂಬರ್ ತಿಂಗಳಲ್ಲಿ ಜಿ.ಎಸ್.ಟಿ. ಸಂಗ್ರಹ ಶೇ.15ರಷ್ಟು ಹೆಚ್ಚಾಗಿ 1.68 ಲಕ್ಷ ಕೋಟಿ ರೂ.ಗಳಿಗೆ ತಲುಪಿದೆ. ಹಬ್ಬದ ದಿನಗಳಲ್ಲಿ ಖರೀದಿ ಚುರುಕಾದ ಕಾರಣ ತೆರಿಗೆ ಸಂಗ್ರಹ ಹೆಚ್ಚಾಗಿದೆ. ಕಳೆದ ವರ್ಷ ನವೆಂಬರ್‌ನಲ್ಲಿ 1.45 ಲಕ್ಷ ಕೋಟಿ ರೂ.ಗಳ ತೆರಿಗೆ ಸಂಗ್ರಹವಾಗಿತ್ತು.

**ಲಂಚ ಪಡೆಯುತ್ತಿದ್ದ ಜಾರಿ ನಿರ್ದೇಶನಾಲಯದ ಅಧಿಕಾರಿ ಬಂಧನ**
ಚೆನ್ನೈ : ವೈದ್ಯರೊಬ್ಬರಿಂದ 20 ಲಕ್ಷ ರೂ. ಲಂಚ ಪಡೆಯುತ್ತಿದ್ದಾಗ ಜಾರಿ ನಿರ್ದೇಶನಾಲಯದ ಅಧಿಕಾರಿ ಅಂಕಿತ್ ತಿವಾರಿಯನ್ನು ತಮಿಳು ನಾಡು ವಿಚಕ್ಷಣ ದಳದ ಸಿಬ್ಬಂದಿ ಹಣದ ಸಮೇತ ಹಿಡಿದಿದ್ದಾರೆ. ನಂತರದಲ್ಲಿ ಅಧಿಕಾರಿಯ ಮನೆಯಲ್ಲಿ ಶೋಧ ನಡೆಸಲಾಗಿದೆ.

**ನಕಲಿ ಸುದ್ದಿ ಹರಡುತ್ತಿದ್ದ ಒಂಭತ್ತು ಯೂಟ್ಯೂಬ್ ಚಾನಲ್‌ಗಳು**
ನವದೆಹಲಿ : ನಕಲಿ ಸುದ್ದಿ ಹರಡುತ್ತಿದ್ದ ಒಂಭತ್ತು ಯೂಟ್ಯೂಬ್ ಚಾನಲ್‌ಗಳನ್ನು ಕೇಂದ್ರ ಪ್ರೆಸ್ ಇನ್ಫಾರ್ಮೇಷನ್ ಬ್ಯೂರೋದ ವಾಸ್ತವ ಪರಿಶೀಲನಾ ಘಟಕ ಬಯಲು ಮಾಡಿದೆ. ಭಾರತ್ ಏಕ್ತಾ ನ್ಯೂಸ್, ಬಜರಂಗ್ ಎಜುಕೇಷನ್, ಬಿ.ಜೆ. ನ್ಯೂಸ್, ಸನ್ಸನಿ ಲೈವ್ ಟಿವಿ, ಜಿವಿಟಿ ನ್ಯೂಸ್, ಡೈಲಿ ಸ್ಟಡಿ, ಅಬ್ ಬೋಲೇಗಾ ಭಾರತ್, ಸರ್ಕಾರಿ ಯೋಜನಾ ಅಫಿಷಿಯಲ್ ಹಾಗೂ ಆಪ್ಕೆ ಗುರೂಜಿ ಚಾನಲ್‌ಗಳು ಸುಳ್ಳು ಸುದ್ದಿ ಹರಡುತ್ತಿದ್ದವು ಎಂದು ಬ್ಯೂರೋ ತಿಳಿಸಿದೆ.

**ಸಾಧನೆಗಾಗಿ ಸೆಲ್ಫಿ ತಾಣ ರೂಪಿಸಲು ಯು.ಜಿ.ಸಿ. ಸೂಚನೆ**
ನವದೆಹಲಿ : ವಿವಿಧ ವಲಯಗಳಲ್ಲಿ ಭಾರತ ಮಾಡಿರುವ ಸಾಧನೆಗಳ ಕುರಿತು ಅರಿವು ಮೂಡಿಸಲು ವಿಶ್ವವಿದ್ಯಾಲಯ ಹಾಗೂ ಕಾಲೇಜು ಕ್ಯಾಂಪಸ್‌ಗಳಲ್ಲಿ ಸೆಲ್ಫಿ ತಾಣಗಳನ್ನು ರೂಪಿಸುವಂತೆ ಯು.ಜಿ.ಸಿ. ಸೂಚನೆ ನೀಡಿದೆ.

**ಸತ್ಯಂ ಸ್ಥಾಪಕ ಮತ್ತಿತರರು 624 ಕೋಟಿ ರೂ. ಮರಳಿಸಲು ಸೂಚನೆ**
ನವದೆಹಲಿ : ಸತ್ಯಂ ಕಂಪ್ಯೂಟರ್ ಸರ್ವೀಸಸ್ ಪ್ರಕರಣಕ್ಕೆ ಸಂಬಂಧಿಸಿದಂತೆ, ಕಂಪನಿಯ ಸ್ಥಾಪಕ ರಾಮಲಿಂಗ ರಾಜು ಹಾಗೂ ಇತರೆ ನಾಲ್ವರು ಮತ್ತು ಸಂಸ್ಥೆಯೊಂದು ಅಕ್ರಮವಾಗಿ 624 ಕೋಟಿ ರೂ. ಗಳಿಸಿದ್ದು, ಇದನ್ನು ವಾಪಸ್ ನೀಡುವಂತೆ ಮಾರುಕಟ್ಟೆ ನಿಯಂತ್ರಕ ಸೆಬಿ ತಿಳಿಸಿದೆ. 2009ರಲ್ಲಿ ಸತ್ಯಂ ಕಂಪ್ಯೂಟರ್ ಹಗರಣ ಬೆಳಕಿಗೆ ಬಂದಿತ್ತು.

**ಡಿ.4ರಂದು ಮಿಜೋರಾಂ ಮತ ಎಣಿಕೆ**
ನವದೆಹಲಿ : ಮಿಜೋರಾಂ ವಿಧಾನಸಭಾ ಚುನಾವಣೆಯ ಮತ ಎಣಿಕೆಯನ್ನು ಡಿಸೆಂಬರ್ 4ರಂದು ನಡೆಸುವುದಾಗಿ ಚುನಾವಣಾ ಆಯೋಗ ತಿಳಿಸಿದೆ. ಡಿಸೆಂಬರ್ 3ರಂದು ಮತ ಎಣಿಕೆ ನಡೆಯಬೇಕಿತ್ತು.

**ಸಮರ ನೌಕೆ ಕಮಾಂಡಿಂಗ್ ಅಧಿಕಾರಿಯಾಗಿ ಮಹಿಳೆ ನೇಮಕ**
ನವದೆಹಲಿ : ಸಮರ ನೌಕೆಗೆ ಇದೇ ಮೊದಲ ಬಾರಿಗೆ ಮಹಿಳೆಯೊಬ್ಬರನ್ನು ಕಮಾಂಡಿಂಗ್ ಅಧಿಕಾರಿಯಾಗಿ ನೇಮಿಸಲಾಗಿದೆ. ನೌಕಾ ದಳದಲ್ಲಿ ಮಹಿಳಾ ಅಗ್ನಿವೀರರ ಸಂಖ್ಯೆ ಈಗ ಸಾವಿರ ದಾಟಿದೆ ಎಂದು ನೌಕಾ ದಳದ ಮುಖ್ಯಸ್ಥ ಆರ್. ಹರಿ ಕುಮಾರ್ ತಿಳಿಸಿದ್ದಾರೆ.

# ತಾಯಿಯಿಂದ ಮಗುವಿಗೆ ಏಡ್ಸ್ ಹರಡದಂತೆ ನಿಯಂತ್ರಣ ಅಗತ್ಯ



## ಏಡ್ಸ್ ಮುಕ್ತ ಸಮಾಜಕ್ಕೆ ಎಲ್ಲರೂ ಕೈ ಜೋಡಿಸುವಂತೆ ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ಕರೆ

ದಾವಣಗೆರೆ, ಡಿ.1- ಜಿಲ್ಲೆಯಲ್ಲಿ ಹೆಚ್ಚಾಗಿ ತಾಯಂದಿರಿಂದ ಮಕ್ಕಳು ಹೆಚ್‌ಐವಿ ಸೋಂಕಿಗೆ ತುತ್ತಾಗುತ್ತಿದ್ದು, ವಿವಿಧ ಸಂಘ-ಸಂಸ್ಥೆಗಳು ಹಾಗೂ ಅಧಿಕಾರಿಗಳ ತಂಡ ಪೂರ್ಣ ಪ್ರಮಾಣದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಏಡ್ಸ್ ನಿರ್ಮೂಲನೆಗೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಹಾಗೂ ಏಡ್ಸ್ ನಿಯಂತ್ರಣ ಕುರಿತಂತೆ ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ವೆಂಕಟೇಶ್ ಎಂ.ವಿ ತಿಳಿಸಿದರು.

ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ನಗರದ ಎ.ವಿ.ಕೆ ಮಹಾವಿದ್ಯಾಲಯದಲ್ಲಿ ಸಮುದಾಯಗಳು ಮುನ್ನಡೆಸಲಿ ಎಂಬ ಘೋಷ ವಾಕ್ಯದೊಂದಿಗೆ ಜರುಗಿದ ವಿಶ್ವ ಏಡ್ಸ್ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿಶ್ವದಾದ್ಯಂತ ಇಂದು ವಿಶ್ವ ಏಡ್ಸ್ ದಿನಾಚರಣೆ ಆಚರಿಸಲಾಗುತ್ತಿದೆ. ನಮ್ಮ ರಾಜ್ಯದಲ್ಲಿ ಏಡ್ಸ್ ಸೋಂಕಿತರ ಪ್ರಮಾಣ 0.29 ರಷ್ಟಿದೆ. ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ 206 ಏಡ್ಸ್ ಪ್ರಕರಣಗಳು ಕಂಡುಬಂದಿದ್ದು, ಸೋಂಕಿತರ ಪ್ರಮಾಣ 0.50 ರಷ್ಟಿದೆ. ಏಡ್ಸ್ ಸೋಂಕಿತರಿಗೆ ಯಾವುದೇ ಲಸಿಕೆ ಇಲ್ಲ ಹಾಗೂ ಸಂಪೂರ್ಣವಾಗಿ ನಿರ್ಮೂಲನೆಯಾಗುವುದಿಲ್ಲ. ಈ ನಿಟ್ಟಿನಲ್ಲಿ ಜನರು ಹೆಚ್ಚಿನ ಜಾಗರೂಕತೆಯಿಂದರಬೇಕು ಎಂದು ಹೇಳಿದರು.

ಕೊರೊನಾ, ಮಧುಮೇಹ, ರಕ್ತದೊತ್ತಡಕ್ಕಿಂತಲೂ ಏಡ್ಸ್ ಭಿನ್ನವಾಗಿದೆ. ಅಸುರಕ್ಷಿತ ಲೈಂಗಿಕ ಪ್ರಕ್ರಿಯಿಂದ 18 ರಿಂದ 25 ವರ್ಷದ ಹದಿಹರೆಯದವರಲ್ಲಿ ಹೆಚ್ಚಾಗಿ ಕಂಡುಬರುವಂತಹ ಸಾಂಕ್ರಾಮಿಕ ಕಾಯಿಲೆಯಾಗಿದೆ. ಇದು ಮೊದಲು ಚಿಂಪಾಂಜಿಗಳಲ್ಲಿ ಕಂಡು ಬಂದಿದ್ದು, ಕಾಲ ಕ್ರಮೇಣ ಮನುಷ್ಯರಲ್ಲಿ ಹರಡತೊಡಗಿತು ಎಂದರು.

ಕಳೆದ ಹತ್ತು ವರ್ಷಗಳ ಹಿಂದೆ ಏಡ್ಸ್ ಅತೀ ಭಯಾನಕ ಕಾಯಿಲೆಯಾಗಿದ್ದು, ಸೋಂಕಿತರನ್ನು ಮುಟ್ಟುವುದಕ್ಕೂ ಜನ ಭಯಪಡುವಂತಹ ಸ್ಥಿತಿ ಉಲ್ಬಣವಾಗಿತ್ತು. ಹೆಚ್ಚಿನ ಸಾಮಾಜಿಕ ಜಾಗೃತಿಯಿಂದ ಇತ್ತೀಚಿನ ದಿನಗಳಲ್ಲಿ ಎಚ್.ಐ.ವಿ ಅಲ್ಪ ಮಟ್ಟಿಗೆ ಕಡಿಮೆಯಾಗಿದೆ. ಕೆಲವು ವರ್ಷಗಳ ಹಿಂದೆ ಪಾಶ್ಚಿಮಾತ್ಯ ದೇಶಗಳಲ್ಲಿ ಏಡ್ಸ್ ಪ್ರಮಾಣ ಹೆಚ್ಚಾಗಿದ್ದಿದ್ದನ್ನು ಕಾಣಬಹುದು ಹಾಗೂ ಪ್ರಸ್ತುತ ದಿನಮಾನಗಳಲ್ಲಿ ಶೂನ್ಯ ಪ್ರಮಾಣವಿದೆ ಎಂದರು.

ಏಡ್ಸ್ ಗರ್ಭಿಣಿಯರಿಂದ ಮಗುವಿಗೆ ಹರಡುದಂತೆ ಆಸ್ಪತ್ರೆಗಳಲ್ಲಿ ಸೂಕ್ತ ಚಿಕಿತ್ಸೆ ನೀಡಿ ನಿಯಂತ್ರಿಸಬೇಕಾಗಿದೆ. ವಿವಿಧ ಸಂಘ-ಸಂಸ್ಥೆಗಳು ಹಾಗೂ ಅಧಿಕಾರಿಗಳ ತಂಡ ಪೂರ್ಣ ಪ್ರಮಾಣದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಏಡ್ಸ್ ನಿರ್ಮೂಲನೆಗೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದರು.

ಮಹಾನಗರ ಪಾಲಿಕೆ ಆಯುಕ್ತರಾದ ರೇಣುಕಾ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಷಣ್ಮುಖಪ್ಪ ಎಸ್, ಪದವಿ ಪೂರ್ವ ಡಿ.ಡಿ.ಪಿ.ಯು ಕರಿಸಿದ್ದಪ್ಪ, ಚಿಗಟೇರಿ ಜಿಲ್ಲಾ ಆಸ್ಪತ್ರೆಯ ಅಧೀಕ್ಷಕರಾದ ಡಾ. ನಾಗೇಂದ್ರಪ್ಪ ಎನ್.ಬಿ, ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯ ಅಧೀಕ್ಷಕ ಡಾ. ಮಧು ಎಸ್. ಪಿ, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕದ ಕಾರ್ಯಕ್ರಮ ಅಧಿಕಾರಿ ಡಾ. ಪಿ. ಡಿ ಮುರಳೀಧರ, ಎ. ವಿ ಕಮಲಮ್ಮ ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಕಮಲಾ ಸೊಪ್ಪಿನ್ ಉಪಸ್ಥಿತರಿದ್ದರು.

### ಜಾಗೃತಿ ಜಾಥಾ

ಏಡ್ಸ್ ದಿನಾಚರಣೆ ಅಂಗವಾಗಿ ನಗರದ ಚಿಗಟೇರಿ ಜಿಲ್ಲಾಸ್ಪತ್ರೆಯ ಆವರಣದಲ್ಲಿ ಏಡ್ಸ್ ಜಾಗೃತಿ ಜಾಥಾಕ್ಕೆ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಷಣ್ಮುಖಪ್ಪ ಎಸ್ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು. ಜಾಥಾವು ವಿದ್ಯಾರ್ಥಿ ಭವನ, ಕೆ.ಇ.ಬಿ ಸರ್ಕಲ್, ಗುರು ಭವನ ಹಾಗೂ ಎ.ವಿ.ಕೆ ರಸ್ತೆ ಮೂಲಕ ಸಾಗಿತು.

**ಪ್ರತಿಜ್ಞಾವಿಧಿ ಸ್ವೀಕಾರ :** ಏಡ್ಸ್ ನಿರ್ಮೂಲನೆ ಕುರಿತಂತೆ ಪ್ರತಿಜ್ಞಾ ವಿಧಿ ಸ್ವೀಕರಿಸಲಾಯಿತು ಹಾಗೂ ಅನೀಮಿಯಾ ಮುಕ್ತ ಪೌಷ್ಟಿಕ ಕರ್ನಾಟಕ ಎಂಬ ಪೋಸ್ಟರ್ ಬಿಡುಗಡೆಗೊಳಿಸಲಾಯಿತು. ಎಚ್.ಐ.ವಿ ನಿರ್ಮೂಲನಾ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆಗೈದ ಸಿಬ್ಬಂದಿಗಳಿಗೆ ಸನ್ಮಾನಿಸಲಾಯಿತು.

# ಶಾಲೆಗಳಿಗೆ ಹುಸಿ ಬಾಂಬ್ ಬೆದರಿಕೆ

**(1ನೇ ಪುಟದಿಂದ)** ಅಧಿಕಾರಿಗಳು ತಿಳಿಸಿದ್ದಾರೆ. ವಿದ್ಯಾರ್ಥಿಗಳು ಶಾಲೆಗೆ ಬಂದ ನಂತರ ಬೆದರಿಕೆಯ ಬಗ್ಗೆ ತಿಳಿಯಿತು. ಪೋಷಕರು ತಕ್ಷಣವೇ ಶಾಲೆಗಳಿಗೆ ವಾಪಸ್ಸಾಗಿ ಮಕ್ಕಳನ್ನು ಕರೆದುಕೊಂಡು ಹೋಗಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಖಾಸಗಿ ಶಾಲೆಗಳಿಗೆ ಬಾಂಬ್ ಬೆದರಿಕೆ ಇ-ಮೇಲ್ ಕಳುಹಿಸಿದವರ ಮೂಲ ಪತ್ತೆ ಹಚ್ಚುವಂತೆ ಪೊಲೀಸ್ ಇಲಾಖೆಗೆ ಆದೇಶಿಸಿರುವುದಾಗಿ ತಿಳಿಸಿದ್ದಾರೆ. ಈ ರೀತಿಯ ಬಾಂಬ್ ಬೆದರಿಕೆ ಕರೆಗಳು ಪುನರಾವರ್ತನೆಯಾಗದಂತೆ ತಡೆಯುವುದಲ್ಲದೆ, ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸುವಂತೆ ಸೂಚಿಸಿದ್ದಾರೆ.

ಈ ಬೆಳವಣಿಗೆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಅವರು, ಹಿರಿಯ ಪೊಲೀಸ್ ಅಧಿಕಾರಿಗಳನ್ನು ಸಂಪರ್ಕಿಸಿ ಚರ್ಚೆ ಮಾಡಿದ್ದಲ್ಲದೆ, ಕಿಡಿಗೇಡಿಗಳ ವಿರುದ್ಧ ಕಠಿಣ ಕ್ರಮಕೈಗೊಳ್ಳಿ, ಇದು ಉತ್ತಮ ಬೆಳವಣಿಗೆ ಅಲ್ಲ ಎಂದಿದ್ದಾರೆ.

ಇಂತಹ ಹುಸಿ ಬಾಂಬ್ ಬೆದರಿಕೆಯನ್ನು ಯಾರು ಕಳುಹಿಸುತ್ತಾರೆ, ಎಲ್ಲಿಂದ ಬರುತ್ತವೆ ಎಂಬುದನ್ನು ಪತ್ತೆ ಹಚ್ಚಿ. 24 ಗಂಟೆಯೊಳಗಾಗಿ ಅವರನ್ನು ವಶಕ್ಕೆ ಪಡೆಯಿರಿ. ಇದು ಕೇವಲ ರಾಜಧಾನಿಗೆ ಮಾತ್ರ ಸೀಮಿತವಲ್ಲ, ರಾಜ್ಯದ ವಿವಿಧೆಡೆ ಇಂತಹ ಪ್ರಕರಣಗಳು ಜರುಗುತ್ತಲಿರುತ್ತವೆ. ಇದರಿಂದ ಮಕ್ಕಳ ಮೇಲೆ ಮಾನಸಿಕ ಒತ್ತಡ ಬೀಳುತ್ತದೆ ಎಂದಿದ್ದಾರೆ.

ಬೆಳಿಗ್ಗೆ ಹುಸಿ ಬಾಂಬ್ ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ನಗರದ ಪೊಲೀಸರು ಎಚ್ಚೆತ್ತು, ಕರೆ ಬಂದಿದ್ದ ಶಾಲೆಗಳಿಗೆ ಬಾಂಬ್ ನಿಷ್ಕ್ರಿಯ ದಳದೊಂದಿಗೆ ಭೇಟಿ ನೀಡಿ ಪರಿಶೀಲಿಸಿದ ನಂತರ ಇದು ಹುಸಿ ಕರೆ ಎಂದು ಘೋಷಿಸಿದರು.

ಮಾಧ್ಯಮಗಳಲ್ಲಿ ಸುದ್ದಿ ಪ್ರಕಟಗೊಳ್ಳುತ್ತಿದ್ದಂತೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಪ್ರತಿ ಪಕ್ಷದ ನಾಯಕ ಆರ್. ಅಶೋಕ್, ಸಮೀಪದ ಶಾಲೆಗಳಿಗೆ ತೆರಳಿ ಮಕ್ಕಳು ಮತ್ತು ಪೋಷಕರಿಗೆ ಧೈರ್ಯ ತುಂಬುವ ಕೆಲಸ ಮಾಡಿದರು.

# ಅಭಿವ್ಯಕ್ತಿ ಸ್ವಾತಂತ್ರ್ಯದ ಆತಂಕ ಬೇಡ : ಸಿ.ಎಂ

ಬೆಂಗಳೂರು, ಡಿ. 1 - ಕಥೆ, ಕಾವ್ಯ, ನಾಟಕ, ಸಂಗೀತ ಮುಂತಾದ ಸೃಜನಶೀಲ ಅಭಿವ್ಯಕ್ತಿಯನ್ನು ಯಾವುದೇ ಕಾರಣಕ್ಕೂ ತಡೆಯುವ ಕೆಲಸ ಮಾಡುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಈ ಸಂಬಂಧ ಪ್ರಕಟಣೆ ನೀಡಿರುವ ಅವರು, ಸಂವಿಧಾನದ ಮೂಲ ಸ್ಫೂರ್ತಿಗೆ ವಿರುದ್ಧವಾಗದಂತೆ ನಡೆಯುವ ಎಲ್ಲಾ ಅಭಿವ್ಯಕ್ತಿಗಳ ಪರವಾಗಿದ್ದೇವೆ, ಕೆಳಹಂತದ ಪೊಲೀಸ್ ಅಧಿಕಾರಿಗಳ ತಪ್ಪು ತಿಳುವಳಿಕೆಯಿಂದಾಗಿ ಒಂದೆರಡು ಅನಾವಶ್ಯಕ ಗೊಂದಲಗಳು ನಿರ್ಮಾಣವಾಗಿದೇ ಎಂಬುದು ತಮ್ಮ ಗಮನಕ್ಕೆ ಬಂದಿದ್ದು, ಈ ಬಗ್ಗೆ ಯಾವುದೇ ಗೊಂದಲಗಳು ಸೃಷ್ಟಿಯಾಗದಂತೆ ಗಮನ ಹರಿಸುವಂತೆ ಪೊಲೀಸ್ ಮಹಾನಿರ್ದೇಶಕರಿಗೆ ಸೂಕ್ತ ಸೂಚನೆಗಳನ್ನು ನೀಡಿರುವುದಾಗಿ ತಿಳಿಸಿದ್ದಾರೆ.

ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯುವ ಕೆಲಸಗಳ ಜೊತೆ ಸರ್ಕಾರ ಸದಾ ನಿಲ್ಲುತ್ತದೆ, ಅಭಿವ್ಯಕ್ತಿ ಸ್ವಾತಂತ್ರ್ಯದ ವಿಚಾರದಲ್ಲಿ ಆತಂಕಿತರಾಗಬಾರದೆಂದು ನಾಡ ಜನತೆಯಲ್ಲಿ ಮುಖ್ಯಮಂತ್ರಿ ಮನವಿ ಮಾಡಿದ್ದಾರೆ.


## ಕರ್ನಾಟಕ ಗ್ರಾಮೀಣ ಬ್ಯಾಂಕ್

(ಸರ್ಕಾರಿ ಸ್ವಾಮ್ಯದ ಷೆಡ್ಯೂಲ್ಡ್ ಬ್ಯಾಂಕ್) ಪ್ರವರ್ತಕರು : ಕೆನರಾ ಬ್ಯಾಂಕ್
ಪ್ರಧಾನ ಕಛೇರಿ : ಸಂಗನಕಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ-583 103 (ಕರ್ನಾಟಕ)
**ಪ್ರಾದೇಶಿಕ ಕಚೇರಿ : ನಂ.496/66, ಸಂಕೋಳ್ ಪ್ಲಾಜಾ, 2ನೇ ಮಹಡಿ ನಾಗನೂರು ರಸ್ತೆ, ಶಾಮನೂರು, ದಾವಣಗೆರೆ-577 004**

### ಬಹಿರಂಗ ಹರಾಜು ನೋಟೀಸು

**ನಮ್ಮ ಬ್ಯಾಂಕಿನ ಈ ಕೆಳಕಂಡ ಶಾಖೆಗಳಿಂದ ಸಾಲ ಪಡೆದು ಖರೀದಿಸಿದ ವಾಹನ ಸಾಲವನ್ನು ಸಕಾಲಕ್ಕೆ ಮರುಪಾವತಿ ಮಾಡದೇ ಇರುವುದರಿಂದ ವಾಹನವನ್ನು ಮುಟ್ಟುಗೋಲು ಹಾಕಲಾಗಿದೆ. ಈ ರೀತಿ ಮುಟ್ಟುಗೋಲು ಹಾಕಿದ ವಾಹನವನ್ನು ಎಲ್ಲಿದೆಯೋ/ಹೇಗಿದೆಯೋ ಹಾಗೆ ಈ ಕೆಳಗೆ ಕಾಣಿಸಿದ ದಿನಾಂಕ ಮತ್ತು ಸಮಯದಂದು ಈ ಕೆಳಕಂಡ ನಿಬಂಧನೆಗಳು ಮತ್ತು ಷರತ್ತುಗಳನ್ನೊಳಗೊಂಡಂತೆ ಬಹಿರಂಗ/ ಖಾಸಗಿಯಾಗಿ ಹರಾಜು ಹಾಕಲಾಗುವುದು.**

**ಮುಟ್ಟುಗೋಲು ಹಾಕಿಕೊಂಡ ವಾಹನಗಳ ವಿವರ.**

| ಕ್ರ. ಸಂ. | ಸಾಲ ಪಡೆದವರ ಹೆಸರು ಮತ್ತು ವಿಳಾಸ | ಸಾಲ ಪಡೆದ ಶಾಖೆ | ಸಾಲದ ಸಂಖ್ಯೆ | ಸಾಲದ ಬಾಕಿ ಇರುವ ಮೊತ್ತ (ರೂ.) | ವಾಹನದ ವಿವರ | ವಾಹನ ಸಂಖ್ಯೆ |
|---|---|---|---|---|---|---|
| 1) | ಶ್ರೀ ರವೀಂದ್ರ ಆರ್. ಬಿನ್. ಹೇಮಸುಂದರ್‌ರಾಜು, ಎಂ.ಸಿ.ಸಿ 'ಬಿ' ಬ್ಲಾಕ್, 11ನೇ ಕ್ರಾಸ್, # 3861, ಬಿಐಇಟಿ ಮುಖ್ಯ ರಸ್ತೆ, ದಾವಣಗೆರೆ. | ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್ | 88115110054816 | 5,77,151.78 + ದಿನಾಂಕ 24-11-2023 ರಿಂದ ಬಡ್ಡಿ ಹಾಗೂ ಇತರೆ ಖರ್ಚು | HMT Ltd., 6522 PS Tractor Model : 2016 | KA17 P9413 |
| 2) | ಶ್ರೀ ರುದ್ರಪ್ಪ ಜಿ.ಎಸ್. ಬಿನ್. ಪಟೇಲ್ ಶಿವಪ್ಪ, ಅಂಗದಹಳ್ಳಿ, ಚನ್ನಗಿರಿ ತಾಲ್ಲೂಕು. | ನಲ್ಲೂರು | 95815325034115 | 11,19,588.94 + ದಿನಾಂಕ 16-09-2023 ರಿಂದ ಬಡ್ಡಿ ಹಾಗೂ ಇತರೆ ಖರ್ಚು | Force Archord DLX OX-25 Tractor & Trailor Tractor Tractor Model : 2015 & Triailor Model : 2015 | KA17 TC7860 & KA17 TC7861 |
| 3) | ಶ್ರೀ ಕೃಷ್ಣಮೂರ್ತಿ ಬಿ.ಆರ್. ಬಿನ್. ರಾಮಪ್ಪ ಕೊಡಗನೂರು, | ಕೊಡಗನೂರು | 69915325241110 | 10,63,304.34 + ದಿನಾಂಕ 30-09-2023ರಿಂದ ಬಡ್ಡಿ ಹಾಗೂ ಇತರೆ ಖರ್ಚು | Mahindra 275 DI Tractor Model : 2010 | KA17 TB2869 |
| 4) | ಶ್ರೀಮತಿ ಪುಟ್ಟಮ್ಮ ಕೋಂ. ರಾಮನಗೌಡ, ಕೋಣನತಲೆ, ಹಿರೇಗೋಣಿಗೆರೆ ಪೋಸ್ಟ್, ಕೊಕ್ಕನೂರು. | ಕೊಕ್ಕನೂರು | 67715325404709 | 13,02,005.74 + ದಿನಾಂಕ 30-09-2023 ರಿಂದ ಬಡ್ಡಿ ಹಾಗೂ ಇತರೆ ಖರ್ಚು | Mahindra275 DI Tractor Model : 2009 | KA17 TB 0491 |
| 5) | ಶ್ರೀ ವಿಜಯಕುಮಾರ್ ಕೆ.ಎನ್. ಬಿನ್. ಮಂಜಣ್ಣ ಕೊರಟಿಕೆರೆ, ಗುತ್ತಿದುರ್ಗ ಪೋಸ್ಟ್. | ದೇವೀಗೆರೆ | 40593110015020 | 3,61,156.98 + ದಿನಾಂಕ 01-12-2023ರಿಂದ ಬಡ್ಡಿ ಹಾಗೂ ಇತರೆ ಖರ್ಚು | Tata Motors ZEST XTA QJET Car Model : 2020 | KA17 D9421 |
| 6) | ಶ್ರೀ ಮಾರುತಿ ಕೆ.ಇ. ಬಿನ್. ಈರಪ್ಪ ಕುರುಬರ್ ಮುಖ್ಯ ರಸ್ತೆ, ಗುತ್ತೂರು, ಹರಿಹರ. | ಹರ್ಲಾಪುರ | 99115312004816 | 48,683.80 + ದಿನಾಂಕ 30-09-2023ರಿಂದ ಬಡ್ಡಿ ಹಾಗೂ ಇತರೆ ಖರ್ಚು | TVS Victor 110 Bike Model : 2016 | KA17 ET 9626 |

ಮೇಲ್ಕಂಡ ವಾಹನಗಳ ಹರಾಜು ನಡೆಯುವ ಸ್ಥಳ : **ಸ್ವಾಮಿ ಯಾರ್ಡ್, ವಿಶ್ವಚೇತನ ಶಾಲೆ ಹತ್ತಿರ, ಶಿರಮಗೊಂಡನಹಳ್ಳಿ ರಸ್ತೆ, ದಾವಣಗೆರೆ.** ದಿನಾಂಕ : **14-12-2023** ಸಮಯ : **ಬೆಳಿಗ್ಗೆ 10-00 ಗಂಟೆಗೆ**
ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : ಪ್ರಕಾಶ್ : 7760733750

**ಹರಾಜಿನ ನಿಬಂಧನೆಗಳು ಹಾಗೂ ಷರತ್ತುಗಳು :**
1) **ಮೇಲ್ಕಾಣಿಸಿದ ವಾಹನಗಳನ್ನು ಯಥಾ ಸ್ಥಿತಿಯಲ್ಲಿ ಮಾರಾಟ ಮಾಡಲಾಗುವುದು.**
2) **ವಾಹನಗಳನ್ನು ಈ ಕೆಳಕಂಡ ವಿಳಾಸದಲ್ಲಿ ದಿನಾಂಕ : 13-12-2023ರ ವರೆಗೆ ಕಛೇರಿ ವೇಳೆಯಲ್ಲಿ ಪ್ರಾದೇಶಿಕ ಕಚೇರಿಯಿಂದ ಲಿಖಿತ ಅನುಮತಿ ಪಡೆದು ವಾಹನವನ್ನು ಗೋಡೌನ್‌ನಲ್ಲಿ ಪರಿಶೀಲಿಸಬಹುದು. ಸ್ವಾಮಿ ಯಾರ್ಡ್, ವಿಶ್ವಚೇತನ ಶಾಲೆ ಹತ್ತಿರ, ಶಿರಮಗೊಂಡನಹಳ್ಳಿ ರಸ್ತೆ, ದಾವಣಗೆರೆ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : ಪ್ರಕಾಶ್ : 7760733750**
3) ಹರಾಜಿನಲ್ಲಿ ಭಾಗವಹಿಸುವವರು ರೂ. 10,000-00 (ಹತ್ತು ಸಾವಿರ ರೂಪಾಯಿಗಳು ಮಾತ್ರ) ಮುಂಗಡ ಠೇವಣಿಯನ್ನು ಪ್ರತ್ಯೇಕವಾಗಿ ಕರ್ನಾಟಕ ಗ್ರಾಮೀಣ ಬ್ಯಾಂಕ್, ದಾವಣಗೆರೆ (ಆಯಾ ವಾಹನಕ್ಕೆ ಸಂಬಂಧ ಪಟ್ಟಂತೆ) ಹೆಸರಿನಲ್ಲಿ ಡಿ.ಡಿ./ ನಗದು ಮುಖಾಂತರ ಹರಾಜು ಪ್ರಾರಂಭವಾಗುವ ಮೊದಲೇ ಪಾವತಿಸತಕ್ಕದ್ದು.
4) ಯಶಸ್ವಿ ಬಿಡ್‌ದಾರರು ಮಾರಾಟದ ಹಣದ ಶೇ 25 ರಷ್ಟು ಹಣವನ್ನು (ಮುಂಗಡ ಠೇವಣಿ ಒಳಗೊಂಡಂತೆ) ಮಾರಾಟ ಮುಗಿದ ಕೂಡಲೇ ಪಾವತಿಸತಕ್ಕದ್ದು. ಹಾಗೂ ಇನ್ನುಳಿದ ಹಣವನ್ನು ಹರಾಜಿನ ದಿನಾಂಕದಿಂದ 15 ದಿನಗಳ ಒಳಗಾಗಿ ಪಾವತಿಸತಕ್ಕದ್ದು. ತಪ್ಪಿದಲ್ಲಿ ಪೂರ್ತಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
5) ಹರಾಜಿನಲ್ಲಿ ಮಾರಾಟವಾದ ವಾಹನವನ್ನು ಆರ್.ಟಿ.ಓ. ಆಫೀಸಿನಲ್ಲಿ ತಮ್ಮ ಹೆಸರಿಗೆ ವರ್ಗಾಯಿಸಿಕೊಳ್ಳುವುದು ಹಾಗೂ ವಾಹನದ ತೆರಿಗೆ ಇತ್ಯಾದಿ ಬಾಕಿ ಇದ್ದಲ್ಲಿ ಭರಿಸುವುದು. ಯಶಸ್ವಿ ಬಿಡ್‌ದಾರರ ಜವಾಬ್ದಾರಿಯಾಗಿರುತ್ತದೆ.
6) ವಾಹನದ ವರ್ಗಾವಣೆಗೆ ತಗಲುವ ಹಾಗೂ ಇನ್ನೂ ಯಾವುದೇ ತರಹದ ಶುಲ್ಕ ಅಥವಾ ಖರ್ಚುಗಳನ್ನು ಯಶಸ್ವಿ ಬಿಡ್‌ದಾರನೇ ಭರಿಸತಕ್ಕದ್ದು.
7) ಬಿಡ್‌ದಾರರು ಪೂರ್ತಿಹಣವನ್ನು ಪಾವತಿ ಮಾಡಿದ ನಂತರ ವಾಹನವನ್ನು ಬಿಡ್‌ದಾರರಿಗೆ ಕೊಡಲಾಗುವುದು. ವಾಹನವನ್ನು ಸ್ವಾಧೀನ ಕೊಟ್ಟನಂತರ ಬಿಡ್‌ದಾರರು ವಾಹನವನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಳ್ಳುವುದಕ್ಕಿಂತ ಮುಂಚೆ ವಾಹನ ಅಪಘಾತವಾಗಲಿ ಅಥವಾ ವಾಹನಕ್ಕೆ ಸಂಬಂಧಿಸಿದಂತೆ ಇನ್ಯಾವುದೇ ತೊಂದರೆ, ಅಡಚಣೆ, ದಾವೆ ಏನೇ ಆದರೂ ಬಿಡ್‌ದಾರರೇ ಜವಾಬ್ದಾರರಾಗಿರುತ್ತಾರೆ. ಈ ವಿಚಾರವಾಗಿ ಬ್ಯಾಂಕಿನವರು ಯಾವುದೇ ರೀತಿಯಲ್ಲಿ ಜವಾಬ್ದಾರರಾಗುವುದಿಲ್ಲ.
8) ಭಾಗವಹಿಸುವ ಬಿಡ್‌ದಾರರು ತಮ್ಮ ಯಾವುದಾದರೂ ಗುರುತಿನ ಚೀಟಿಯನ್ನು ತರಬೇಕು.
9) ಯಾವುದೇ ಕಾರಣ ಕೊಡದೆ ಹರಾಜನ್ನು ರದ್ದುಗೊಳಿಸುವ ಅಥವಾ ಮುಂದೂಡುವ ಮತ್ತು ನಿಬಂಧನೆ ಹಾಗೂ ಷರತ್ತುಗಳನ್ನು ಬದಲಾವಣೆ ಮಾಡುವ ಹಕ್ಕನ್ನು ಬ್ಯಾಂಕ್ ಹೊಂದಿರುತ್ತದೆ.
10) ಮೇಲ್ಕಂಡ ವಿಷಯದಲ್ಲಿ ಯಾವುದೇ ಹೆಚ್ಚಿನ ಮಾಹಿತಿಗೆ ಕರ್ನಾಟಕ ಗ್ರಾಮೀಣ ಬ್ಯಾಂಕ್, ಪ್ರಾದೇಶಿಕ ಕಚೇರಿ, ಸಂಕೋಳ್ ಪ್ಲಾಜಾ, ನಾಗನೂರು ರಸ್ತೆ, ಶ್ಯಾಮನೂರು, ದಾವಣಗೆರೆ. (08192-222332, 8050102906, ಇವರನ್ನು ವಿಚಾರಿಸಬಹುದು.

ಸ್ಥಳ : ದಾವಣಗೆರೆ
ದಿನಾಂಕ : 01-12-2023

ಸಹಿ/- ಪ್ರಾದೇಶಿಕ ವ್ಯವಸ್ಥಾಪಕರು,
ಕರ್ನಾಟಕ ಗ್ರಾಮೀಣ ಬ್ಯಾಂಕ್, ದಾವಣಗೆರೆ.


# ನಾಡಿದ್ದು ಸುವರ್ಣ ಸೌಧಕ್ಕೆ ಮುತ್ತಿಗೆ



ದಾವಣಗೆರೆ, ಡಿ.1- ಕೃಷಿ ಕಾಯ್ದೆ ವಾಪಾಸ್, ಎಂಎಸ್‌ಪಿ ಬೆಲೆಗೆ ಶಾಸನಬದ್ಧ ಕಾಯ್ದೆ ಜಾರಿ ಸೇರಿದಂತೆ ಹಲವು ಬೇಡಿಕೆಗಳಿಗೆಒತ್ತಾಯಿಸಿಇದೇ ದಿನಾಂಕ 4ರಂದು ಬೆಳಗಾವಿ ಸುವರ್ಣ ಸೌಧಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಹೇಳಿದ್ದಾರೆ.

ಶುಕ್ರವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಸರ್ಕಾರ ರಚನೆಯಾಗಿ ಆರು ತಿಂಗಳು ಸಮೀಪಿಸಿದರೂ ಚುನಾವಣಾ ಪೂರ್ವದಲ್ಲಿ ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಿಲ್ಲ ಎಂದು ಆರೋಪಿಸಿದರು.

ಎಪಿಎಂಸಿ ಕಾಯ್ದೆ ವಾಪಾಸ್ ಪಡೆಯುವಲ್ಲಿ ಸಿದ್ಧರಾಮಯ್ಯ ಜಾಣತನದ ಕಳ್ಳಾಟ, ನಾಜೂಕಿನ ಡ್ರಾಮಾ ಮಾಡುತ್ತಿದ್ದಾರೆ. ಎಪಿಎಂಸಿ ಲೈಸನ್ಸ್ ರದ್ದು ಮಾಡುವುದಾಗಿ ವರ್ತಕರಿಗೆ ನೋಟೀಸ್ ಕಳುಹಿಸಲಾಗಿದೆ. ಯಾವ ಕಾರ್ಪೊರೇಟ್ ಕಂಪನಿಗಳ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂಬು ದನ್ನು ಸರ್ಕಾರ ತಿಳಿಸಬೇಕು ಎಂದರು.

ಭೂ ಸುಧಾರಣಾ ಕಾಯ್ದೆ ಜಾರಿಯಿಂದ ಭೂಮಿ ಬೆಲೆ ಹೆಚ್ಚಾಗಿದೆ. ಹಣವಂತರು ಭೂಮಿ ಖರೀದಿಸಲಾರಂಭಿಸಿದ್ದಾರೆ. ಇತ್ತ ಗ್ಯಾರಂಟಿ ಯೋಜನೆಗಳಿಗೆ ಹಣ ಕೊಡಲು ರೆವಿನ್ಯೂ ಇಲಾಖೆಯ ನೋಂದಣಿ ಶುಲ್ಕ ಹೆಚ್ಚಿಸಲಾಗಿದೆ. ಈ ವರ್ಷಾಂತ್ಯಕ್ಕೆ 35 ಸಾವಿರ ಕೋಟಿ ರೂ. ಆದಾಯ ನಿರೀಕ್ಷಿಸಲಾಗಿದೆ. ನೋಂದಣಿ ಇಲಾಖೆ ತೆರಿಗೆ ಹಣ ಸಂಗ್ರಹಕ್ಕಾಗಿ ಸಿದ್ದರಾಮಯ್ಯ ರೈತರನ್ನು ಬಲಿ ಕೊಡಲು ನಿರ್ಧರಿಸಿದ್ದಾರೆ ಎಂದು ಆರೋಪಿಸಿದರು. ಕೃಷಿ ಭೂಮಿ ಕಾರ್ಪೊರೇಟ್ ಕಂಪನಿಗಳ ಕೈಗೆ ಸಿಕ್ಕರೆ ತೀವ್ರ ಅಪಾಯ ಎದುರಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಸಿದ್ದರಾಮಯ್ಯ ತಾವು ಮಾತುಕೊಟ್ಟಂತೆ ಕೃಷಿ ಕಾಯ್ದೆ ವಾಪಾಸ್ ಪಡೆಯಬೇಕು. ಐದು ಗ್ಯಾರಂಟಿ ಕೊಟ್ಟಿರುವ ಸಿದ್ಧರಾಮಯ್ಯ ರೈತರಿಗಾಗಿ ಏನೂ ಕೊಟ್ಟಿಲ್ಲ. ಬದಲಾಗಿ ಕೃಷಿಯಿಂದ ರೈತರನ್ನು ವಿಮುಖಗೊಳಿಸಲು ಹೊರಟಿದ್ದಾರೆ ಎಂದರು.

ಕೃಷಿ ಪಂಪ್‌ಸೆಟ್‌ಗಳ ಅಕ್ರಮ - ಸಕ್ರಮದಡಿ ನೀಡುತ್ತಿದ್ದ ಟ್ರಾನ್ಸ್‌ಫಾರಂ, ಕಂಬ, ವೈರ್ ಇತರೆ ಉಪಕರಣ ನೀಡುವುದನ್ನು ಸರ್ಕಾರ ರದ್ದುಗೊಳಿಸಿದ್ದು, ರೈತರ ಹಿತದೃಷ್ಟಿಯಿಂದ ಈ ಆದೇಶವನ್ನೂ ಕೂಡಲೇ ಹಿಂಪಡೆಯಬೇಕು ಎಂದು ಇದೇ ವೇಳೆ ಚಂದ್ರಶೇಖರ್ ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ಕಾರ್ಯದರ್ಶಿ ಮಲ್ಲಶೆಟ್ಟಿಹಳ್ಳಿ ಚನ್ನಬಸಪ್ಪ, ಜಿಲ್ಲಾಧ್ಯಕ್ಷ ಶತಕೋಟಿ ಬಸಪ್ಪ, ಎನ್. ಬಸವರಾಜ್ ದಾಗಿನಕಟ್ಟೆ, ಮಂಡಲೂರು ವಿಶ್ವನಾಥ್, ಕರೇಕಟ್ಟೆ ಕರೀಮುಲ್ಲಾ, ಕಾಳೇಶ್ ಯಲ್ಲೋದಹಳ್ಳಿ ಇತರರು ಉಪಸ್ಥಿತರಿದ್ದರು.

### ದಾವಣಗೆರೆ ತಾಲ್ಲೂಕಿಗೆ ನೂತನ ಅಧ್ಯಕ್ಷ

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ದಾವಣಗೆರೆ ತಾಲ್ಲೂಕು ಅಧ್ಯಕ್ಷರನ್ನಾಗಿ ಮಂಡಲೂರು ವಿಶ್ವನಾಥ್ ಅವರನ್ನು ಆಯ್ಕೆ ಮಾಡಲಾಗಿದೆ. ಕಾರ್ಯಾಧ್ಯಕ್ಷರನ್ನಾಗಿ ಮಲ್ಲಶೆಟ್ಟಿಹಳ್ಳಿ ಮಂಜುನಾಥ್, ಪ್ರಧಾನ ಕಾರ್ಯದರ್ಶಿಯಾಗಿ ಆಂಜನೇಯ ಕಾಟನ್ ಮಿಲ್ ಶ್ರೀನಿವಾಸ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಕೋಡಿಹಳ್ಳಿ ಚಂದ್ರಶೇಖರ್ ಹೇಳಿದರು.

# ಬ್ಯಾಂಕ್‌ಗಳಿಗೆ ಎಸ್ಪಿ ಸೂಚನೆ

**(1ನೇ ಪುಟದಿಂದ)** ಯಾರಾದರೂ ಕಂಡು ಬಂದರೆ ಕೂಡಲೇ ಅವರ ಮೇಲೆ ನಿಗಾ ವಹಿಸಿ, ಸ್ಥಳೀಯ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು. ಬ್ಯಾಂಕ್ ಅಧಿಕಾರಿಗಳು ಸ್ಥಳೀಯ ಪೊಲೀಸ್ ಠಾಣೆಗಳೊಂದಿಗೆ ಸಂಪರ್ಕದಲ್ಲಿರಬೇಕು. ಬ್ಯಾಂಕ್‌ಗಳಿಗೆ ಸಂಬಂಧಿಸಿದ ಪ್ರಕರಣಗಳ ತನಿಖೆಗೆ ಅವಶ್ಯಕ ಸಹಕಾರ ನೀಡಬೇಕು. ಬ್ಯಾಂಕ್ ಗಳಿಗೆ ಬರುವ ಹಿರಿಯ ನಾಗರಿಕರಿಗೆ ಹಾಗೂ ಹಣ ತೆಗೆದುಕೊಂಡು ಹೋಗುವ ಗ್ರಾಹಕರಿಗೆ ಗಮನ ಬೇರೆಡೆ ಸೆಳೆದು ಹಣ ಲಪಟಾಯಿಸುವ ಸಾಧ್ಯತೆ ಇರುತ್ತದೆ. ಹಾಗಾಗಿ ಅವರುಗಳಿಗೆ ಹಣದ ಭದ್ರತೆ ಬಗ್ಗೆ ಸೂಕ್ತ ತಿಳುವಳಿಕೆ ನೀಡಬೇಕು ಹಾಗೂ ಬ್ಯಾಂಕ್‌ಗಳ ಒಳಗಡೆ, ಹೊರಗಡೆ ಗಾರ್ಡ್ ವ್ಯವಸ್ಥೆ ಮಾಡಬೇಕು.

ಇತ್ತೀಚಿಗೆ ಸೈಬರ್ ವಂಚನೆ ಪ್ರಕರಣಗಳು ಹೆಚ್ಚಾಗುತ್ತಿದ್ದು, ಬ್ಯಾಂಕ್‌ಗಳು ಸಾರ್ವಜನಿಕರಿಗೆ ಸೈಬರ್ ವಂಚನೆ ಪ್ರಕರಣಗಳ ಬಗ್ಗೆ ಜಾಗೃತಿ ಮೂಡಿಸಬೇಕು. ಸೈಬರ್ ವಂಚನೆ ಪ್ರಕರಣಗಳ ತನಿಖೆ ಸಮಯದಲ್ಲಿ ಪೊಲೀಸರಿಗೆ ವಿಳಂಬ ಮಾಡದೇ ಸಹಕರಿಸಬೇಕು. ಸೈಬರ್ ವಂಚನೆ ಪ್ರಕರಣಗಳಲ್ಲಿ ನೊಂದ ವ್ಯಕ್ತಿಗಳಿಗೆ ಅಲೆದಾಡಿಸದೇ ಅವರುಗಳಿಗೆ ಕೂಡಲೇ ಅವಶ್ಯಕ ಸಹಾಯ ಮಾಡುವಲ್ಲಿ ಕಾರ್ಯ ಪ್ರವೃತ್ತರಾಗಬೇಕು ಎಂದು ತಿಳಿಸಲಾಯಿತು.

ಸಭೆಯಲ್ಲಿ ಲೀಡ್ ಬ್ಯಾಂಕ್ ವ್ಯವಸ್ಥಾಪಕ ಪ್ರಕಾಶ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ವಿಜಯಕುಮಾರ ಎಂ. ಸಂತೋಷ, ಗ್ರಾಮಾಂತರ ಡಿವೈಎಸ್ಪಿ ಬಸವರಾಜ ಬಿ. ಎಸ್, ಪೊಲೀಸ್ ನಿರೀಕ್ಷಕ ಎಲ್. ರುದ್ರಪ್ಪ ಸೇರಿದಂತೆ ಪೊಲೀಸ್ ಅಧಿಕಾರಿಗಳು ಹಾಗೂ ಕೆನರಾ ಬ್ಯಾಂಕ್, ಎಸ್‌ಬಿಐ ಬ್ಯಾಂಕ್ ವ್ಯವಸ್ಥಾಪಕರು ಸೇರಿದಂತೆ ಜಿಲ್ಲೆಯ ವಿವಿಧ ಬ್ಯಾಂಕುಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## 2 ಸಾವಿರ ನೋಟು ಚಲಾವಣೆಯಲ್ಲಿ

**(1ನೇ ಪುಟದಿಂದ)** ಲಕ್ಷ ಕೋಟಿ ರೂ.ಗಳ ನೋಟುಗಳು ಚಲಾವಣೆಯಲ್ಲಿದ್ದವು. ಈಗ 9,760 ಕೋಟಿ ರೂ.ಗಳು ಮಾತ್ರ ಚಲಾವಣೆಯಲ್ಲಿವೆ ಎಂದು ರಿಸರ್ವ್ ಬ್ಯಾಂಕ್ ಹೇಳಿದೆ. ಈಗಲೂ ಜನರು ಈ ಬ್ಯಾಂಕ್ ನೋಟುಗಳನ್ನು ಆರ್.ಬಿ.ಐ.ನ 19 ಕಚೇರಿಗಳಲ್ಲಿ ವಿನಿಮಯ ಮಾಡಿಕೊಳ್ಳಬಹುದು. ಇಲ್ಲವೇ ಯಾವುದೇ ಭಾರತೀಯ ಅಂಚೆ ಕಚೇರಿಯಿಂದ ರಿಸರ್ವ್ ಬ್ಯಾಂಕ್‌ಗೆ ರವಾನಿಸಬಹುದು.

## ಏಳೆಂಟು ಮಕ್ಕಳು ಗುರಿಯಾಗಲಿ

**(1ನೇ ಪುಟದಿಂದ)** ಸಂಪ್ರದಾಯವನ್ನು ಮುಂದುವರೆಸಬೇಕಿದೆ. ದೊಡ್ಡ ಕುಟುಂಬಗಳು ರಷ್ಯಾದ ಜನರ ಜೀವನದ ಭಾಗವಾಗಬೇಕಿದೆ. ಕುಟುಂಬಗಳು ಸರ್ಕಾರ ಹಾಗೂ ಸಮಾಜದ ಅಡಿಪಾಯವಷ್ಟೇ ಅಲ್ಲದೇ, ಅದು ಅಧ್ಯಾತ್ಮಿಕ ಪದ್ಧತಿಯಾಗಿದೆ ಹಾಗೂ ನೈತಿಕತೆಯ ಆಧಾರವೂ ಆಗಿದೆ ಎಂದವರು ಹೇಳಿದ್ದಾರೆ.

## ಹೋಟೆಲ್, ಗ್ಯಾರೇಜ್‌ಗಳಲ್ಲಿ ಬಾಲಕಾರ್ಮಿಕ ಪದ್ದತಿ ನಿಷೇಧ ಜಾಗೃತಿ

ದಾವಣಗೆರೆ, ಡಿ.1- ಪ್ಯಾನ್ ಇಂಡಿಯಾ ರಕ್ಷಣೆ ಮತ್ತು ಪುನರ್ವಸತಿ ಆಂದೋಲನದ ಅಂಗವಾಗಿ ದಾವಣಗೆರೆ ನಗರದಲ್ಲಿ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಹಾಗೂ ಬಾಲ್ಯಾವಸ್ಥೆ ಮತ್ತು ಕಿಶೋರಾವಸ್ಥೆ (ನಿಷೇಧ ಮತ್ತು ನಿಯಂತ್ರಣ) ತಿದ್ದುಪಡಿ ಕಾಯ್ದೆ ಕುರಿತು ವಿವಿಧ ಅಂಗಡಿ, ಹೋಟೆಲ್, ಗ್ಯಾರೇಜ್ ಹಾಗೂ ವಾಣಿಜ್ಯ ಸಂಸ್ಥೆಗಳಿಗೆ ಭೇಟಿ ನೀಡಿ, ಅಧಿಕಾರಿಗಳು ಬಾಲ ಹಾಗೂ ಕಿಶೋರಾವಸ್ಥೆ ಕಾರ್ಮಿಕರ ತಪಾಸಣೆ ನಡೆಸಿ, ಮಾಲೀಕರಿಗೆ ಕರಪತ್ರ ಮತ್ತು ಸ್ಟಿಕರ್ಸ್ ನೀಡಿ ಜಾಗೃತಿ ಮೂಡಿಸಿದರು.

ಕಾರ್ಯಾಚರಣೆಯಲ್ಲಿ ಕಾರ್ಮಿಕ ನಿರೀಕ್ಷಕರಾದ ರಾಜಶೇಖರ ಹಿರೇಮಠ್ ಮತ್ತು ರಾಜಪ್ಪ.ಟಿ, ಯೋಜನಾ ನಿರ್ದೇಶಕ ಪ್ರಸನ್ನ ಇ.ಎನ್ ಉಪಸ್ಥಿತಿರಿದ್ದರು.

# ಧರ್ಮ ಆಧರಿತ ಶಿಕ್ಷಣ ಸಂಸ್ಥೆಗಳಿಂದ ಗುಣಮಟ್ಟದ ಶಿಕ್ಷಣ

## ರಾಣೇಬೆನ್ನೂರು ಬಿಎಜೆಎಸ್‌ಎಸ್ ಕಾಲೇಜು ಕಾರ್ಯಕ್ರಮದಲ್ಲಿ ಆಡಳಿತಾಧಿಕಾರಿ ಡಾ.ಆರ್.ಎಂ.ಕುಬೇರಪ್ಪ



ರಾಣೇಬೆನ್ನೂರು, ಡಿ.1- ಧರ್ಮಾಧಾರಿತ ಶಿಕ್ಷಣ ಸಂಸ್ಥೆಗಳಿಂದ ಗುಣಮಟ್ಟದ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಸಮಾಜಮುಖಿ ಚಿಂತಕರಾಗುವರು. ಅವರ ಬದುಕು ಹರ್ಷದಾಯಕವಾಗಿರಲಿದೆ ಎಂದು ಬಿಎಜೆಎಸ್‌ಎಸ್ ಕಾಲೇಜು ಆಡಳಿತಾ ಧಿಕಾರಿ ಡಾ.ಆರ್.ಎಂ.ಕುಬೇರಪ್ಪ ಹೇಳಿದರು.

ಕಾಲೇಜು ಆವರಣದಲ್ಲಿ ಗುರು ನಿವಾಸ ಕೋಣೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ನಮ್ಮ ಸಂಸ್ಥೆ ಸಾಕಷ್ಟು ಸಂಕಷ್ಟಗಳಿಗೆ ಒಳಗಾಗಿತ್ತು, 16 ವರ್ಷಗಳ ಹಿಂದೆ ಗಾಯತ್ರಿ ಕೋಟಿ ಜಪ ಯಜ್ಞ ಮಾಡಿದ ನಂತರ ಸಂಕಷ್ಟಗಳು ದೂರಾದವು ಎಂದು ಹೇಳಿದರು.

ಸಾಧು, ಸಂತರು, ದೈವೀ ಪುರುಷರ ಸಂಪರ್ಕದಿಂದ, ಅವರ ಆಗಮನದಿಂದ ಪಾವಿತ್ರ್ಯತೆ ಹೆಚ್ಚಲಿದೆ. ಪ್ರತಿದಿನ ನಮ್ಮ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಗಾಯತ್ರಿ ಮಂತ್ರ ಪಠಿಸುತ್ತಿದ್ದಾರೆ. ಆ ಮೂಲಕ ಸನಾತನ ಧರ್ಮವನ್ನು ಉಳಿಸುವ ಪ್ರಯತ್ನ ನಮ್ಮ ಸಂಸ್ಥೆಯಲ್ಲಿ ನಡೆದಿದೆ ಎಂದು ಕುಬೇರಪ್ಪ ಹೇಳಿದರು.

ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಸಂಚಾರಿ ರಾಮಾಂಜನೇಯ ಗುರುಕುಲದ ದತ್ತಾತ್ರೇಯ ವಾಸುದೇವ ಮಾತನಾಡಿ, ರಾಮನಾಮ ಪಠಿಸುವುದರೊಂದಿಗೆ ಜನ್ಮಜನ್ಮಾಂತರದ ಬದುಕನ್ನು ಉದ್ಧಾರ ಮಾಡಿಕೊಳ್ಳಬಹುದು. ರಾಮನಾಮ ಕೃಷ್ಣನಾಮಕ್ಕಿಂತಲೂ ಶ್ರೇಷ್ಠ ಎಂದರು.

ಪೂಜೆಯೊಂದಿಗೆ ಉಪಸಭಾಪತಿ ಹಾಗೂ ಸಂಸ್ಥೆಯ ಛೇರ್ಮನ್ ರುದ್ರಪ್ಪ ಲಮಾಣಿ ಅವರು ಗುರು ನಿವಾಸ, ಶ್ರೀ ರಾಮಾಂಜನೇಯ ಭಾವಚಿತ್ರ ಹಾಗೂ ಗಾಯತ್ರಿ ಮಂಟಪದ ಉದ್ಘಾಟನೆ ನೆರವೇರಿಸಿದರು.

ನಂತರ ನಡೆದ ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿ ಸದಸ್ಯ ಕೆ.ಕೆ ಹಾವಿನಾಳ, ಶಿವಪ್ಪ ಜಡೇದ ಮತ್ತು ಇತರರು ಭಾಗವಹಿಸಿದ್ದರು. ಮೃತ್ಯುಂಜಯ ಪರಿಚಯಿಸಿದರು, ದೇವರಾಜ ಸ್ವಾಗತಿಸಿದರು.

# ಎನ್.ಸಿ.ಸಿ.ಯಿಂದ ಸಮಯ ಪ್ರಜ್ಞೆ, ನಿಷ್ಠೆ, ಪ್ರಮಾಣಿಕತೆ ಬೆಳೆಯುತ್ತದೆ

## ಹರಪನಹಳ್ಳಿಯ ಕಾರ್ಯಕ್ರಮದಲ್ಲಿ ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಆರ್. ರಾಮನಗೌಡ್ರು

ಹರಪನಹಳ್ಳಿ, ಡಿ. 1 - ಪ್ರತಿಯೊಬ್ಬ ವಿದ್ಯಾರ್ಥಿಗಳು ಎನ್.ಸಿ.ಸಿ.ಯಲ್ಲಿ ಭಾಗವಹಿಸುವುದರಿಂದ ಸಮಯ ಪ್ರಜ್ಞೆ ಮತ್ತು ನಿಷ್ಠೆ ಪ್ರಮಾಣಿಕತೆ ಬೆಳೆಯುತ್ತದೆ ಎಂದು ಅಂಬ್ಲಿ ದೊಡ್ಡ ಭರಮಪ್ಪ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಆರ್. ರಾಮನಗೌಡ್ರು ಹೇಳಿದರು.

ಪಟ್ಟಣದ ಅಂಬ್ಲಿ ದೊಡ್ಡ ಭರಮಪ್ಪ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ 75ನೇ ರಾಷ್ಟ್ರೀಯ ಕ್ರೆಡೆಟ್ ಕಾಪ್ಸ್ ದಿನಾಚರಣೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಎನ್.ಸಿ.ಸಿ.ಯಲ್ಲಿ ಪಾಲ್ಗೊಳ್ಳುವುದ ರಿಂದ ದೇಶ ಪ್ರೇಮ ಬೆಳೆಯುತ್ತದೆ. ವಿದ್ಯಾಭ್ಯಾಸದ ಜೊತೆಯಲ್ಲಿಯೇ ಇಂತಹ ಪಠ್ಯೇತರ ಚಟುವಟಿಕೆಗಳಲ್ಲಿ ಕಾರ್ಯಗಳಲ್ಲಿ ಭಾಗವಹಿಸುವುದು ಮುಖ್ಯ ಎಂದರು.



ಹರಪನಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಎನ್‌ಸಿಸಿ ಅಧಿಕಾರಿಗಳಾದ ಎಂ. ಪಂಪಾ ನಾಯಕ್ ಅವರು ಮಾತನಾಡಿ, ಕೆಡೆಟ್‌ಗಳಿಗೆ ಶಿಸ್ತು ಹಾಗೂ ರಾಷ್ಟ್ರ ನಿರ್ಮಾಣದಲ್ಲಿ ಕೆಡೆಟ್‌ಗಳ ಪಾತ್ರದ ಬಗ್ಗೆ ಸವಿಸ್ತಾರವಾಗಿ ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ 33 ಬೆಟಾಲಿಯನ್, ದಾವಣಗೆರೆಯ ಸುಬೇದಾರ್ ಸುರೇಂದ್ರ ಸಿಂಗ್ ಹಾಗೂ ಖಾಯಂ ತರಬೇತುದಾರರಾದ ಡಿ. ಎನ್. ತಿಪ್ಪೇಕರ್‌ರವರು ಕೆಡೆಟ್‌ಗಳ ಆರೋಗ್ಯದ ಮಹತ್ವ ಹಾಗೂ ಎನ್‌ಸಿಸಿ ಸಂಘಟನೆಯ ಬಗ್ಗೆ ವಿವರಿಸಿದರು.

ಎಡಿಬಿ ಪ್ರಥಮ ದರ್ಜೆ ಕಾಲೇಜಿನ ಇಂಗ್ಲಿಷ್ ಪ್ರಾಧ್ಯಾಪಕ ಜಿ. ಬಿ. ನಾಗನಗೌಡ ಅವರು ಭಾರತೀಯ ಸೇನೆ ಹಾಗೂ ಬಲಿಷ್ಠ ಭಾರತ ನಿರ್ಮಾಣದಲ್ಲಿ ಯುವ ಕೆಡೆಟ್ ಗಳ ಕಾಣಿಕೆ ಏನು ಎನ್ನುವುದರ ಕುರಿತು ವಿವರಿಸಿದರು.

ಈ ಸಂದರ್ಭದಲ್ಲಿ ಪ್ರಾಂಶುಪಾಲ ಡಾ. ಎಸ್.ಎಂ ಸಿದ್ದಲಿಂಗ ಮೂರ್ತಿಯವರು, ಡಾ. ಡಿ ತಿಪ್ಪೇಸ್ವಾಮಿ, ನವಾಜ್ ಬಾಷಾ, ದೈಹಿಕ ಶಿಕ್ಷಣ ವಿಭಾಗ ಹಾಗೂ ಎನ್‌ಸಿಸಿ ಅಧಿಕಾರಿಯಾದ ಬಸಲಿಂಗಪ್ಪ ಕಲ್ಮನಿ, ಎಚ್.ವಿ ಮಂಜುಳಾ ಎಂ, ನಯಾಜ್, ಕೃತಿಕಾ ಹಾಗೂ ಇತರರು ಉಪಸ್ಥಿತರಿದ್ದರು.

# ನಗರಕ್ಕೆ ಇಂದು ಸಂತೋಷ್ ಹೆಗ್ಡೆ



ಜಿಲ್ಲಾ ವಕೀಲರ ಸಂಘದಿಂದ ಉಪನ್ಯಾಸ ಮಾಲಿಕೆ-4 ಸಾಮಾಜಿಕ ಮೌಲ್ಯ ಮತ್ತು ಸಮಕಾಲೀನ ಸಮಾಜ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಇಂದು ಮಧ್ಯಾಹ್ನ 2-30ಕ್ಕೆ ವಕೀಲರ ಸಾಂಸ್ಕೃತಿಕ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಸುಪ್ರೀಂಕೋರ್ಟ್‌ನ ವಿಶ್ರಾಂತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಅವರು ನೆರವೇರಿಸಿ ಸಾಮಾಜಿಕ ಮೌಲ್ಯ ಮತ್ತು ಸಮಕಾಲೀನ ಸಮಾಜ ಕುರಿತು ಉಪನ್ಯಾಸ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ, ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಜೆ.ವಿ. ವಿಜಯಾನಂದ, ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರಾದ ದಶರಥ ಟಿ. ಇವರುಗಳು ಆಗಮಿಸಲಿದ್ದಾರೆ.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್‌ಕುಮಾರ್ ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮದಲ್ಲಿ ಟಿ.ಕೆ. ಬಸವರಾಜ್ ಗೋಪನಾಳ್, ಎಸ್. ಬಸವರಾಜ್, ಎ.ಎಸ್. ಮಂಜುನಾಥ್ ಮತ್ತು ಇತರರು ಉಪಸ್ಥಿತರಿರುವರು.

# ಕ್ಷಯ ರೋಗ ಪತ್ತೆ ಆಂದೋಲನ



ಮಲೇಬೆನ್ನೂರು

ಮಲೇಬೆನ್ನೂರು, ಡಿ.1- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ನಾಳೆ ದಿನಾಂಕ 2 ರವರೆಗೆ ನಡೆಯುತ್ತಿರುವ ಸಕ್ರಿಯ ಕ್ಷಯ ರೋಗ ಪತ್ತೆ ಆಂದೋಲನ ಕಾರ್ಯಕ್ರಮದಡಿಯಲ್ಲಿ ಮಲೇಬೆನ್ನೂರು ಸಮುದಾಯ ಆರೋಗ್ಯ ಕೇಂದ್ರದ ವ್ಯಾಪ್ತಿಯ ಹಾಲಿವಾಣ, ಹರಳಹಳ್ಳಿ, ಕುಂಬಳೂರು ಗ್ರಾ.ಪಂ.ಗಳ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಸಮೀಕ್ಷಾ ಕಾರ್ಯಕ್ರಮವನ್ನು ಟಿಹೆಚ್‌ಓ ಡಾ.ಪ್ರಶಾಂತ್ ಅವರು ಭೇಟಿ ನೀಡಿ ಸಮೀಕ್ಷಾ ಮೇಲ್ವಿಚಾರಣೆ ನಡೆಸಿದರು.

ಈ ವೇಳೆ ಮಾತನಾಡಿದ ಡಾ.ಪ್ರಶಾಂತ್ ಅವರು ಎರಡು ವಾರಕ್ಕಿಂತ ಹೆಚ್ಚಿನ ಅವಧಿಯ ಕೆಮ್ಮು, ಜ್ವರ, ತೂಕದಲ್ಲಿ ಇಳಿಕೆ, ರಾತ್ರಿ ವೇಳೆ ಹೆಚ್ಚಿನ ಬೆವರು, ಹಸಿವಾಗದೇ ಇರುವುದು, ಕೆಲವು ವೇಳೆ ಕಫದ ಜೊತೆ ರಕ್ತ ಕಾಣಿಸುವುದು ಈ ಎಲ್ಲಾ ಲಕ್ಷಣ ಇರುವ ವ್ಯಕ್ತಿಗಳು ಸಮೀಪದ ಆರೋಗ್ಯ ಕೇಂದ್ರಕ್ಕೆ ಹೋಗಿ ಕಫ ತಪಾಸಣೆ ಅಥವಾ ಕ್ಷ-ಕಿರಣ ತಪಾಸಣೆ ಮೂಲಕ ರೋಗ ಪತ್ತೆ ಹಚ್ಚಬಹುದು.

ಇದಕ್ಕೆ ಉಚಿತ ಚಿಕಿತ್ಸೆ ಇದ್ದು ರೋಗವನ್ನು ವಾಸಿ ಮಾಡಬಹುದಾಗಿದೆ. ರೋಗಿಗಳಿಗೆ ಸರ್ಕಾರದ ವತಿಯಿಂದ ಸಹಾಯಧನ ಇರುತ್ತದೆ. ಪ್ರಧಾನ ಮಂತ್ರಿಗಳ ಆಶಯದಂತೆ 2025 ಕ್ಕೆ ಭಾರತವನ್ನು 'ಕ್ಷಯ ಮುಕ್ತ ರಾಷ್ಟ್ರ' ವನ್ನಾಗಿಸುವಲ್ಲಿ ಸಮುದಾಯದ ಸಹಭಾಗಿತ್ವ ಅವಶ್ಯವಾಗಿದೆ ಎಂದು ಕರೆ ನೀಡಿದರು.

ಹರಿಹರ ತಾಲ್ಲೂಕಿನ ಒಟ್ಟು ಜನಸಂಖ್ಯೆಯ ಶೇ.20 ರಷ್ಟು ಜನಸಂಖ್ಯೆಯನ್ನು ಸಮೀಕ್ಷೆಗೆ ಆಯ್ಕೆ ಮಾಡಿದ್ದು, ಒಟ್ಟು 74 ತಂಡಗಳು ಸಮೀಕ್ಷೆ ನಡೆಸುತ್ತಿವೆ. ತಾಲ್ಲೂಕಿನಲ್ಲಿ 133 ಸಕ್ರಿಯ ಪ್ರಕರಣಗಳಿದ್ದು, ಮಲೇಬೆನ್ನೂರು ವ್ಯಾಪ್ತಿಯಲ್ಲಿ 16 ಪ್ರಕರಣಗಳಿವೆ. ರೋಗಿಗಳ ಮನೆಯ ಸುತ್ತ ಸಮೀಕ್ಷಾ ಕಾರ್ಯ ನಡೆಯುತ್ತಿದೆ ಎಂಬ ಮಾಹಿತಿಯನ್ನು ಪ್ರಶಾಂತ್ ನೀಡಿದರು.

ಕಾರ್ಯಕ್ರಮದಲ್ಲಿ ತಾಲ್ಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಉಮ್ಮಣ್ಣ, ತಾಲ್ಲೂಕು ಕ್ಷಯ ಮೇಲ್ವಿಚಾರಕ ಮಂಜುನಾಥ್, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ನಳಿನಾಕ್ಷಿ, ಸಿಹೆಚ್‌ಓ ದೀಕ್ಷಿತಾ ಹಾಗೂ ಆಶಾ ಕಾರ್ಯಕರ್ತರು ಭಾಗವಹಿಸಿದ್ದರು.

# ನಗರದಲ್ಲಿ ಇಂದು ಭಾರತೀಯ ಮಹಿಳಾ ಒಕ್ಕೂಟದ ಸಮ್ಮೇಳನ

ದಾವಣಗೆರೆ, ಡಿ. 1- ಭಾರತೀಯ ಮಹಿಳಾ ಒಕ್ಕೂಟದ ಎನ್‌ಎಫ್‌ಐಡಬ್ಲ್ಯೂ ಐದನೇ ರಾಜ್ಯ ಸಮ್ಮೇಳನ ನಾಳೆ ದಿನಾಂಕ 2 ಮತ್ತು 3 ರಂದು ನಗರದಲ್ಲಿ ನಡೆಯಲಿದೆ ಎಂದು ಎನ್‌ಎಫ್‌ಐಡಬ್ಲ್ಯೂ ಜಿಲ್ಲಾಧ್ಯಕ್ಷರಾದ ಎಂ.ಬಿ. ಶಾರದಮ್ಮ ತಿಳಿಸಿದ್ದಾರೆ.

ನಾಳೆ ದಿನಾಂಕ 2ರ ಶನಿವಾರ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸುವ ಮಹಿಳೆಯರಿಂದ ಮಧ್ಯಾಹ್ನ 12 ಗಂಟೆಗೆ ಬೃಹತ್ ಮೆರವಣಿಗೆ ನಡೆಸಿ ನಂತರ ಜಯದೇವ ಸರ್ಕಲ್ ಹತ್ತಿರದ ನಾಟ್ಯಾಚಾರ್ಯ ಕುಲಕರ್ಣಿ ರಸ್ತೆಯಲ್ಲಿನ ಕಾಂ.ಗೀತಾ ಮುಖರ್ಜಿ ವೇದಿಕೆಯಲ್ಲಿ ಬಹಿರಂಗ ಸಭೆ ನಡೆಸಲಾಗುವುದು.

ಎನ್‌ಎಫ್‌ಐಡಬ್ಲ್ಯೂ ಮಹಿಳಾ ಸಂಘಟನೆಯ ರಾಜ್ಯಾಧ್ಯಕ್ಷರಾದ ಎ. ಜ್ಯೋತಿ ಬಹಿರಂಗ ಸಭೆಯ ಅಧ್ಯಕ್ಷತೆ ವಹಿಸುವರು. ಬಹಿರಂಗ ಸಭೆಯ ಉದ್ಘಾಟನೆಯನ್ನು ಎನ್‌ಎಫ್‌ಐಡಬ್ಲ್ಯೂ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕಾಂ. ಅನಿ ರಾಜಾ ನವದೆಹಲಿ ನೆರವೇರಿಸಿ ಮಾತನಾಡುವರು.

ಮುಖ್ಯ ಅತಿಥಿಗಳಾಗಿಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಕನ್ನಡ ಸಹ ಪ್ರಾಧ್ಯಾಪಕ ಜಿ. ಕಾವ್ಯಶ್ರೀ, ಸಿ.ಪಿ.ಐ. ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು, ಎ.ಐ.ಟಿ.ಯು.ಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ವಿಜಯ ಭಾಸ್ಕರ್, ಎ.ಐ.ಕೆ.ಎಸ್ ನ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ಪಿ.ವಿ.ಲೋಕೇಶ್, ಸಿಪಿಐ ಜಿಲ್ಲಾ ಖಜಾಂಚಿ ಕಾಂ. ಆನಂದರಾಜ್, ದಾವಣಗೆರೆ ಎ.ಐ.ಟಿ.ಯು.ಸಿ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಜಿ. ಉಮೇಶ್, ಅಂಗನವಾಡಿ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಜಯಮ್ಮ, ವಿದ್ಯಾರ್ಥಿ ಸಂಘಟನೆ ರಾಜ್ಯ ಅಧ್ಯಕ್ಷೆ ಎಲ್.ವೈ. ವೀಣಾ, ಎಐಡಿಆರ್‌ಎಂ ರಾಷ್ಟ್ರೀಯ ಮಂಡಳಿ ಸದಸ್ಯ ಮಹೇಶ್ ಕುಮಾರ್ ರಾಥೋಡ್ ಸೇರಿದಂತೆ, ಇತರರು ಭಾಗವಹಿಸುವರು.



ಶ್ರೀ ವೀರ ವರಸಿದ್ಧಿ ವಿನಾಯಕ ದೇವಸ್ಥಾನದಲ್ಲಿ ಕಾರ್ತಿಕ

ದಾವಣಗೆರೆಯ ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿರುವ ಶ್ರೀ ವೀರ ವರಸಿದ್ಧಿ ವಿನಾಯಕ ದೇವಸ್ಥಾನದಲ್ಲಿ ನಿನ್ನೆ ಕಾರ್ತೀಕೋತ್ಸವ ಆಚರಿಸಲಾಯಿತು.

# ನಗರಕ್ಕೆ ಇಂದು ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ

ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ, ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ, ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಗಳ 60 ರ ಸಂಭ್ರಮಾಚರಣೆಯು ವಿನೋಬನಗರ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲಾ ಆವರಣದಲ್ಲಿ ಇಂದು ನಡೆಯುವುದು.

ಇಂದು ಬೆಳಿಗ್ಗೆ 10.30 ಕ್ಕೆ ಸಂಸ್ಥಾಪಕರ ದಿನ ಹಾಗೂ ಕೃತಿ ಲೋಕಾರ್ಪಣೆ ನಡೆಯುವುದು. ಅಧ್ಯಕ್ಷತೆಯನ್ನು ಶ್ರೀಮತಿ ಸುವರ್ಣ ನಾಗೇಶ ಕವಿ ವಹಿಸುವರು. ಕೃತಿ ಲೋಕಾರ್ಪಣೆ ನಿವೃತ್ತ ಲೋಕಾಯುಕ್ತ ಸಂತೋಷ್ ಹೆಗ್ಡೆಯವರಿಂದ ನೆರವೇರುವುದು. ಕೃತಿ ರಚನಾಕಾರರಾದ ಶ್ರೀಮತಿ ಅರುಂಧತಿ ಟಿ. ಸಜ್ಜನ್, ಮುಖ್ಯ ಅತಿಥಿಗಳಾಗಿ ಮಂಜುನಾಥ್ ಹೆಚ್.ಬಿ. ಆಗಮಿಸುವರು. ಕಾರ್ಯಕ್ರಮದಲ್ಲಿ ವೀರಣ್ಣ ವಿ. ಚಿಗಟೇರಿ ಉಪಸ್ಥಿತರಿರುವರು.

ಸಂವಾದ-ಸಂಸ್ಥಾಪಕರ ಸ್ಮರಣೆ ನಡೆಯುವುದು. ನಡೆಸಿಕೊಡುವವರು : ಡಾ. ಚಿನ್ಮಯ ಪಿ. ಚಿಗಟೇರಿ, ಭಾಗವಹಿಸುವವರು : ಎಂ.ಕೆ. ಬಕ್ಕಪ್ಪ, ಎಂ.ಟಿ. ಮಳಗಿ, ಬೂಸ್ನೂರು ಪ್ರಕಾಶ್.

ಸಂಜೆ 5 ಗಂಟೆಗೆ ಭವಿಷ್ಯತ್ತಿನಲ್ಲಿ ವಿದ್ಯಾಸಂಸ್ಥೆ ವಿಷಯ ಕುರಿತು ಕಾರ್ಯಕ್ರಮ ನಡೆಯುವುದು. ಅಧ್ಯಕ್ಷತೆಯನ್ನು ಮುರುಗೇಂದ್ರ ವಿ. ಚಿಗಟೇರಿ ವಹಿಸುವರು.ಮುಖ್ಯ ಅತಿಥಿಗಳಾಗಿ ಸಂಸದ ಜಿ.ಎಂ. ಸಿದ್ದೇಶ್ವರ, ಹೃದಯ ರೋಗ ತಜ್ಞರಾದ ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ, ಊಟಿಯ ಗುಡ್ ಶೆಫರ್ಡ್ ಸ್ಕೂಲ್ ಅಧ್ಯಕ್ಷರಾದ ಜೇಕಬ್ ಥಾಮಸ್ ಆಗಮಿಸುವರು.

ಬಹುಮಾನ ವಿತರಣೆಯನ್ನು ಮಹಾಪೌರರಾದ ವಿನಾಯಕ ಪೈಲ್ವಾನ್ ನಡೆಸಿಕೊಡುವರು. ನಂತರ ಸಾಂಸ್ಕೃತಿಕ ವೈಭವದಲ್ಲಿ ಕಲಾವಿದೆ ಶ್ರೀಮತಿ ವ್ರತಾ ವೀರಣ್ಣ ಚಿಗಟೇರಿ ಅವರಿಂದ ಕೂಚುಪುಡಿ ನೃತ್ಯ ಮತ್ತು ಶಿಕ್ಷಕರು, ಹಿರಿಯ ವಿದ್ಯಾರ್ಥಿಗಳಿಂದ ನೃತ್ಯ ನಡೆಯುವುದು.

# ನಿಗಮದ ಹಿತಾಸಕ್ತಿಗಿಂತ ಚುನಾವಣಾ ಹಿತಾಸಕ್ತಿ ಜಾಸ್ತಿ: ಮಹಾಬಲೇಶ್ವರ ಗೌಡ್ರು

ದಾವಣಗೆರೆ, ಡಿ. 1- ಕರ್ನಾಟಕ ರಾಜ್ಯ ಬೀಜ ನಿಗಮದಲ್ಲಿ ವ್ಯಾಪಕ ಅವ್ಯವಹಾರಗಳು ನಡೆದಿದ್ದು, ನಿಗಮದ ಹಿತಾಸಕ್ತಿಗಿಂತ ಚುನಾವಣಾ ಹಿತಾಸಕ್ತಿ ಜಾಸ್ತಿಯಾಗಿದೆ ಎಂದು ನಿಗಮದ ಮಾಜಿ ನಿರ್ದೇಶಕ ಮಹಾಬಲೇಶ್ವರಗೌಡ್ರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರ ಷೇರುಗಳನ್ನು ರೈತ ಪ್ರತಿನಿಧಿಗಳೇ ತಮ್ಮ ರಕ್ತ ಸಂಬಂಧಿಗಳಿಗೆ ವರ್ಗಾವಣೆ ಮಾಡಿರುವುದು ಲೆಕ್ಕ ಪರಿಶೋಧನಾ ವರದಿಯಿಂದ ತಿಳಿದು ಬಂದಿದೆ. ಆದ್ದರಿಂದ ಸರ್ಕಾರ ತನಿಖಾ ಸಮಿತಿ ನೇಮಿಸಿ, ರೈತ ಷೇರುದಾರರ ಹಿತಾಸಕ್ತಿ ಕಾಪಾಡುವಂತೆ ಆಗ್ರಹಿಸಿದರು.

ಕರ್ನಾಟಕ ರಾಜ್ಯ ಬೀಜ ನಿಗಮ 1972 ರಲ್ಲಿ ಸ್ಥಾಪನೆಗೊಂಡಿದ್ದು, ಮೂರು ಜನರ ಪಾಲುದಾರಿಕೆಯಲ್ಲಿ ನಡೆಯುತ್ತಿ. ಇದು ಕರ್ನಾಟಕ ಸರ್ಕಾರ-2 ಭಾರತ ಸರ್ಕಾರ-3, ರೈತರ ಷೇರುಗಳ ಮಧ್ಯೆ ನಿಗಮ ಮಂಡಳಿ ನಡೆಯುತ್ತಿದ್ದು, ನಿಗಮದಲ್ಲಿ ಕರ್ನಾಟಕ ಸರ್ಕಾರದ ಷೇರುಗಳು ಹೆಚ್ಚಾಗಿ ಇರುವುದರಿಂದ ಆಡಳಿತ ಕಾರ್ನಾಟಕ ಸರ್ಕಾರದ ಕೈಯ್ಯಲಿದೆ. ರೈತರ ಷೇರು ವರ್ಗಾವಣೆಯಲ್ಲಿ ಹಲವಾರು ನ್ಯೂನತೆಗಳಿವೆ. ಮೋಸದ ವರ್ಗಾವಣೆ ಎಂದು ಗೊತ್ತಾಗಿದೆ ಎಂದರು.

ರೈತ ಷೇರುದಾರರು ಈ ಬಗ್ಗೆ ರಿಜಿಸ್ಟ್ರಾರ್ ಆಫ್ ಕಂಪನಿ ನವದೆಹಲಿಗೆ ಪತ್ರ ಬರೆಯಲಾಗಿದ್ದು, ಈ ಬಗ್ಗೆ ಕೂಲಂಕುಶವಾಗಿ ಷೇರು ಲೆಕ್ಕ ಪರಿಶೋಧನೆ ಮಾಡಲು ಆರ್‌ಓಸಿ ಸೂಚಿಸಿದೆ. ತಪ್ಪಿತಸ್ಥ ನಿರ್ದೇಶಕ ಮಂಡಳಿ ಹಾಗೂ ಅಧಿಕಾರಿಗಳ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂತೋಷ್, ಎಂ.ಪಿ. ನಾಯಕ್, ಪಿ. ಬಸವರಾಜ್, ಬೋಂಗಾಳೆ ಹಾಲೇಶ್, ರವಿಕುಮಾರ್ ಪಾಟೀಲ್, ಕರಿಬಸವನಗೌಡ ಪಾಟೀಲ್, ಎನ್.ಬಿ. ನೀಲಕಂಠಸ್ವಾಮಿ ಉಪಸ್ಥಿತರಿದ್ದರು.

# ನಗರದಲ್ಲಿ ನಾಳೆ ಜೈ ಭಜರಂಗಿ ಸ್ನೇಹ ಬಳಗದಿಂದ ಆರೋಗ್ಯ ತಪಾಸಣಾ ಶಿಬಿರ

ದಾವಣಗೆರೆ,ಡಿ.1-ಜೈ ಭಜರಂಗಿ ಸ್ನೇಹ ಬಳಗದ ವತಿಯಿಂದ ವೆಲ್‌ನೆಸ್ ಫರ್‌ಎವರ್ ಸಹಯೋಗದಲ್ಲಿ ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ 2ನೇ ವರ್ಷದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ನಾಡಿದ್ದು ದಿನಾಂಕ 3ರ ಭಾನುವಾರ ವಿದ್ಯಾನಗರದ 1ನೇ ಬಸ್ ಸ್ಟಾಪ್ ಗಾಂಧಿ ಪ್ರತಿಮೆ ಬಳಿ ಹಮ್ಮಿಕೊಳ್ಳಲಾಗಿದೆ.

# ಖಾಯಂಗೊಳಿಸುವಂತೆ ಒತ್ತಾಯಿಸಿ ಪೌರಕಾರ್ಮಿಕರ ಪ್ರತಿಭಟನೆ



ದಾವಣಗೆರೆ, ಡಿ. 1- ರಾಜ್ಯಾದ್ಯಂತ ನೇರಪಾವತಿ ಪೌರ ಕಾರ್ಮಿಕರು, ಒಳಚರಂಡಿ ಸ್ವಚ್ಛತಾ ಕಾರ್ಮಿಕರು, ವಾಹನ ಚಾಲಕರು, ನೀರು ಸರಬರಾಜು ಸಹಾಯಕರು ಹಾಗೂ ಸಹಾಯಕರನ್ನು ಕೂಡಲೇ ಖಾಯಂಗೊಳಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರ ಕಾರ್ಮಿಕರ ಮಹಾಸಂಘದ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಮಹಾನಗರ ಪಾಲಿಕೆ ಪೌರ ಕಾರ್ಮಿಕರ ಮತ್ತು ಡಿ ಗ್ರೂಪ್ ನೌಕರರ ಸಂಘ, ಮಹಾನಗರ ಪಾಲಿಕೆ ಗುತ್ತಿಗೆ ದಿನಗೂಲಿ ಪೌರ ಕಾರ್ಮಿಕರ ಸಂಘದ ಪೌರಕಾರ್ಮಿಕರು ಪ್ರತಿಭಟನೆ ನಡೆಸುವ ಮೂಲಕ ಅಪರ ಜಿಲ್ಲಾಧಿಕಾರಿ ಪಿ. ಎನ್. ಲೋಕೇಶ್ ಅವರಿಗೆ ಮನವಿ ಸಲ್ಲಿಸಿದರು.

ಇದೇ ವೇಳೆ ಸಂಘದ ಅಧ್ಯಕ್ಷ ಎಲ್.ಎಂ. ಹನುಮಂತಪ್ಪ ಮಾತನಾಡಿ, ಸ್ವಚ್ಛತಾ ಕಾರ್ಮಿಕರಾದ ಪೌರಕಾರ್ಮಿಕರು, ನೇರಪಾವತಿ ಪೌರಕಾರ್ಮಿಕರು, ಕಸದ ವಾಹನ ಚಾಲಕರು, ಯುಜಿಡಿ ಸಹಾಯಕರು, ವಾಲ್‌ಮನ್‌ಗಳು ಸೇರಿದಂತೆ ಎಲ್ಲರಿಗೂ ವಸತಿ ನಿರ್ಮಾಣಕ್ಕಾಗಿ ವಸತಿ ನಿವೇಶನ ನೀಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘದ ಪದಾಧಿಕಾರಿ ಗಳಾದ ಬಿ.ಹೆಚ್. ವೀರಭದ್ರಪ್ಪ, ಎನ್. ನೀಲಗಿರಿಯಪ್ಪ, ಎಂ. ಓಮೇಶ್, ಎಲ್.ಹೆಚ್. ಸಾಗರ್, ಬಿ. ಲೋಹಿತ್, ಎಲ್.ಜಿ. ಬಸವರಾಜ್, ಎನ್. ಶಿವರಾಜ್, ಮುತ್ತುರಮ್ಮ, ರಜನಿಕಾಂತ್, ಸಂದೀಪ್ ಮತ್ತಿತರರು ಭಾಗವಹಿಸಿದ್ದರು.

# ನಿಟುವಳ್ಳಿಯಲ್ಲಿ ನಾಳೆ ಶಿವಚಿದಂಬರ ಜಯಂತ್ಯೋತ್ಸವ

ನಿಟ್ಟುವಳ್ಳಿಯ ಶ್ರೀ ಶಿವಚಿದಂಬರ ಕ್ಷೇತ್ರದಲ್ಲಿ ನಾಳೆ ಭಾನುವಾರ ಶ್ರೀ ಶಿವಚಿದಂಬರ ಜಯಂತ್ಯೋತ್ಸವ ನಡೆಯಲಿದೆ. ಕಾರ್ಯಕ್ರಮದ ಅಂಗವಾಗಿ ಇಂದು ಸಂಜೆ 5.30 ಗಂಟೆಗೆ ಶ್ರೀ ಶಿವಚಿದಂಬರೇಶ್ವರರ ಭಾವಚಿತ್ರ, ಉತ್ಸವಮೂರ್ತಿಯೊಂದಿಗೆ ಪ್ರಮುಖ ಬೀದಿಗಳಲ್ಲಿ ಭಜನೆ, ಘೋಷಣೆ, ಮಂಗಳ ವಾದ್ಯಗಳೊಂದಿಗೆ ಮೆರವಣಿಗೆಯ ಮೂಲಕ ಸ್ವಸ್ಥಾನಕ್ಕೆ ತಲುಪುವುದು. ನಂತರ ಉತ್ಸವ ಮೂರ್ತಿ ಸ್ಥಾಪನೆ, ಅಖಂಡ ದೀಪ ಸ್ಥಾಪನೆ, ಭಜನೆ, ಮಂಗಳಾರತಿ, ತೀರ್ಥ ಪ್ರಸಾದ ವಿತರಣೆ ನಡೆಯುವುದು.

ಶ್ರೀ ಶಿವಚಿದಂಬರ ಸೇವಾ ಸಂಘ ಭಕ್ತ ಮಂಡಳಿ ಆಶ್ರಯದಲ್ಲಿ ನಾಳೆ ಭಾನುವಾರ ಜಯಂತ್ಯೋತ್ಸವವನ್ನು ಹಮ್ಮಿಕೊಳ್ಳಲಾಗಿದೆ. ಸಾನ್ನಿಧ್ಯವನ್ನು ಸಂಸ್ಥಾಪಕ ಗೌರವ ಅಧ್ಯಕ್ಷ ವಿ. ಮೋಹನ್ ದೀಕ್ಷಿತ್ ಸಾನ್ನಿಧ್ಯ ವಹಿಸುವರು.

ನಾಳೆ ಭಾನುವಾರ ಬೆಳಿಗ್ಗೆ 5 ಗಂಟೆಗೆ ಕಾಕಡಾರತಿ, ಪ್ರಾತಃ ಸ್ಮರಣೆ, 6 ಗಂಟೆಗೆ ಪಂಚಾಮೃತ ಅಭಿಷೇಕ, ರುದ್ರಾಭಿಷೇಕ, ಬಿಲ್ವಾರ್ಚನೆ, ಮಹಾಪೂಜೆ. ಬೆಳಿಗ್ಗೆ 8 ಗಂಟೆಗೆ ಪುಣ್ಯಾಹ ವಾಚನ, ಕಲಾ ಹೋಮ, ರುದ್ರಾಸ್ವಾಹಕಾರ, ಪೂರ್ಣಾಹುತಿ ನಡೆಯುವುದು.

ಬೆಳಿಗ್ಗೆ 10 ಗಂಟೆಗೆ ಶ್ರೀಮತಿ ನಿರ್ಮಲ ಚಿದಂಬರ ದೀಕ್ಷಿತ್ ಹಾಗೂ ಶ್ರೀ ಶಿವಚಿದಂಬರ ಮಹಿಳಾ ಮಂಡಳಿಯಿಂದ ಪ್ರವಚನ ಕಥಾನಿರೂಪಣೆ, ಬೆಳಿಗ್ಗೆ 11.15 ಕ್ಕೆ ಶ್ರೀ ಶಿವಚಿದಂಬರೇಶ್ವರರ ತೊಟ್ಟಿಲೋತ್ಸವ, ವೈದಿಕ ವೃಂದ ಪೂಜೆ, ಜನ್ಮಾರತಿ, ಸುಹಾಸಿನಿಯರಿಗೆ ಉಡಿ ತುಂಬುವುದು ಇತ್ಯಾದಿ, ಮಧ್ಯಾಹ್ನ 12.30 ಗಂಟೆಗೆ ಸಾಮೂಹಿಕ ಭಜನೆ, ಪಲ್ಲಕ್ಕಿ ಉತ್ಸವ ನಡೆಯುವುದು. ಮಧ್ಯಾಹ್ನ 2.30 ಕ್ಕೆ ಮಹಾ ನೈವೇದ್ಯ, ಸಂಜೆ 6.30 ಕ್ಕೆ ಭಜನೆ ನಡೆಯುವುದು.

# ನಗರದಲ್ಲಿ ಇಂದು ಶ್ರೀ ಶಿವಾನಂದ ತೀರ್ಥಸ್ವಾಮಿಗಳವರ ಪುಣ್ಯಾರಾಧನೆ

ಜಯದೇವ ಸರ್ಕಲ್‌ನಲ್ಲಿರುವ ಶ್ರೀ ರಾಜನಹಳ್ಳಿ ಹರಿಹರಪ್ಪ ಟ್ರಸ್ಟ್‌ನ ಶ್ರೀ ಗುರು ದತ್ತಾತ್ರೇಯ ದೇವಾಲಯದ ಶ್ರೀ ಶಿವಾನಂದ ತೀರ್ಥಗುರು ಅಧ್ಯಾತ್ಮ ಮಂದಿರದಲ್ಲಿ ಶ್ರೀ ಮತ್ಪರಮಹಂಸೇತ್ಯಾದಿ ಶ್ರೀ ಶಿವಾನಂದ ತೀರ್ಥಸ್ವಾಮಿಗಳವರ ಎಪ್ಪತ್ತೈದನೇ ಪುಣ್ಯಾರಾಧನೆ ಕಾರ್ಯಕ್ರಮವು ಇಂದು ನಡೆಯಲಿದೆ.

ಪ್ರಾತಃಕಾಲ 6 ರಿಂದ 7 ರವರೆಗೆ ಚೌಘಡ, ಭೂಪಾಳಿ, ಕಾಕಡಾರತಿ, ಗಣಪತಿ ಪ್ರಾರ್ಥನೆ, ಶ್ರೀ ವೀರಾಂಜನೇಯ ಸ್ವಾಮಿ ಪೂಜೆ, ಬೆಳಿಗ್ಗೆ 9 ರಿಂದ ಶ್ರೀಗಳವರ ಪಾದುಕೆಗಳಿಗೆ ಲಘುನ್ಯಾಸಪೂರ್ವಕ ಏಕವಾರ ರುದ್ರಾಭಿಷೇಕ, ಮಧ್ಯಾಹ್ನ 1.30 ಕ್ಕೆ ತೀರ್ಥಪ್ರಸಾದ ವಿನಿಯೋಗ ನಡೆಯುವುದು. ಸಂಜೆ 6 ಗಂಟೆಗೆ ಶ್ರೀ ಶಿವಾನಂದ ತೀರ್ಥ ಗುರುಗಳವರ ಚರಿತ್ರೆಯ ನಿರೂಪಣೆ, ರಾತ್ರಿ 8 ರವರೆ ಶ್ರೀ ವಾಸವಿ ಭಜನಾ ಮಂಡಳಿಯವರಿಂದ ಭಜನೆ ಜರುಗಲಿದೆ.

# ವಕೀಲರ ಮೇಲೆ ಥಳಿತ : ಪ್ರತಿಭಟನೆ




ದಾವಣಗೆರೆ, ಡಿ.1- ವಕೀಲ ಪ್ರೀತಮ್ ಮೇಲೆ ಮನಬಂದಂತೆ ಥಳಿಸಿರುವ ಚಿಕ್ಕಮಗಳೂರು ಪೊಲೀಸ್ ಇಲಾಖೆಯ ಪಿಎಸ್‌ಐ ಹಾಗೂ ಸಿಬ್ಬಂದಿ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ಆಗ್ರಹಿಸಿ ಜಿಲ್ಲಾ ವಕೀಲರ ಸಂಘ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದೆ.

ನಿನ್ನೆ ಸಂಜೆ ಚಿಕ್ಕಮಗಳೂರಿನಲ್ಲಿ ವಕೀಲ ಪ್ರೀತಮ್ ಮೇಲೆ ಸ್ಥಳೀಯ ಪಿಎಸ್‌ಐ ಮಹೇಶ್ ಪೂಜಾರಿ ಹಾಗೂ ಇತರೆ 6 ಸಿಬ್ಬಂದಿಗಳು ಮನ ಬಂದಂತೆ ಥಳಿಸಿ, ಮಾರಣಾಂತಿಕ ಹಲ್ಲೆ ಮಾಡಿದ್ದಾರೆ.

ಈ ಘಟನೆಯನ್ನು ಜಿಲ್ಲಾ ವಕೀಲರ ಸಂಘದ ಸದಸ್ಯರು ಖಂಡಿಸುತ್ತಾರೆ ಎಂದು ವಕೀಲರ ಸಂಘವು ಹೇಳಿದೆ.

ಆಪಾಧಿತರ ಮೇಲೆ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಮೂಲಕ ಅವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಇಂತಹ ಘಟನೆಗಳು ಮರುಕಳಿಸದಂತೆ ಕ್ರಮ ವಹಿಸಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಈ ವೇಳೆ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್‌ಕುಮಾರ್, ಉಪಾಧ್ಯಕ್ಷ ಜಿ.ಕೆ.ಬಸವರಾಜ್ ಗೋಪನಾಳು, ಕಾರ್ಯದರ್ಶಿ ಎಸ್.ಬಸವರಾಜ್, ಸಹ ಕಾರ್ಯದರ್ಶಿ ಮಂಜುನಾಥ್, ವಕೀಲರಾದ ಎಂ.ಎನ್. ಆಂಜನೇಯ, ಸಿ.ಎಂ.ಚನ್ನಕೇಶವ, ಎಸ್.ಪರಮೇಶ್, ಬಿ.ಎಸ್.ಲಿಂಗರಾಜ್, ಎಂ.ಜಿ.ರಮೇಶ್, ಬಿ.ಎಂ. ಹನುಮಂತಪ್ಪ, ಎ.ಎಲ್.ಹಾಲೇಶ್, ಎಂ. ಶಂಕರ್‌ರಾವ್, ಅಣ್ಣಪ್ಪ, ಹೆಚ್.ಎಸ್.ಯೋಗೇಶ್, ಹೆಚ್.ದಿವಾಕರ್, ಶಿವಕುಮಾರ್, ನೀಲಕಂಠಯ್ಯ, ನಾಗರಾಜ್, ಮಲ್ಲಿಕಾರ್ಜುನ ಗುಮ್ಮನೂರು, ಅಂದನೂರು ಶಿವಕುಮಾರ್, ಎಲ್.ಶ್ಯಾಮ್, ಟಿ.ಎಸ್. ಗಿರೀಶ್, ತಾರೇಶ್ ಇತರರು ಇದ್ದರು.


## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ರೇವಣಸಿದ್ದಪ್ಪ ಬಿನ್ ಕರಿಬಸಪ್ಪ (ಮೊಬೈಲ್ ನಂ.6360611661. 9008250843) ದೊಡ್ಡಬಾತಿ ದಾವಣಗೆರೆ ತಾಲ್ಲೂಕು ಇವರು ದೊಡ್ಡಬಾತಿ ಗ್ರಾಮದ ವಾಸಿಗಳಾದ ಬಿ.ಜಿ. ಮಂಜುನಾಥ್ ಬಿನ್ ಬಿ.ಜಿ. ರೇವಣಸಿದ್ದಪ್ಪ (ಮೊ. 8747581530) ಇವರಿಂದ ದೊಡ್ಡಬಾತಿ ಗ್ರಾಮದ ಸರಹದ್ದಿಗೆ ಸೇರಿದ ರೇವಣಸಿದ್ದೇಶ್ವರ ದೇವಸ್ಥಾನದ ಹತ್ತಿರ ಇರುವ ಪಂಚಾಯಿತಿ ನಂ. 60/2 ಇ-ಸ್ವತ್ತು ನಂ. 151200201400101892 ಅಳತೆ 28x100 ಅಡಿ ಉಳ್ಳ ಖಾಲಿ ನಿವೇಶನವನ್ನು ಖರೀದಿಸಲು ಇಚ್ಛಿಸಿರುತ್ತಾರೆ. ಆದ ಕಾರಣ ಸದರಿ ಆಸ್ತಿಗೆ ಸಂಬಂಧಪಟ್ಟಂತೆ ಯಾರಿಗಾದರೂ ಹಕ್ಕು ಇದ್ದಲ್ಲಿ ಅಥವಾ ತಂಟೆ-ತಕರಾರು ಇದ್ದಲ್ಲಿ ತಮ್ಮ ತಕರಾರನ್ನು ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಈ ಪ್ರಕಟಣೆಯಾದ 7 ದಿನಗಳೊಳಗಾಗಿ ನನ್ನ ಕಛೇರಿಗೆ ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಲಾಗುವುದು. 7 ದಿನಗಳು ಮುಗಿದ ನಂತರ ಬಂದ ತಕಾರಾರಿಗೆ ಯಾವುದೇ ಮಾನ್ಯತೆ ಇರುವುದಿಲ್ಲ ತಿಳಿಯಿರಿ.

**ಕೆ.ಬಿ. ಶೈಲಾಶ್ರೀ**
**ವಕೀಲರು, #1963/1,2**
**SS ಲೇಔಟ್, ಎ ಬ್ಲಾಕ್,**
**ಒಳಾಂಗಣ ಕ್ರೀಡಾಂಗಣ ಹತ್ತಿರ,**
**ದಾವಣಗೆರೆ.**
**ಮೊ. : 9448658502**

**ಸಹಿ/- ಕೆ.ಬಿ. ಶೈಲಾಶ್ರೀ**
**ಬಿ.ಎಸ್ಸಿ ಎಲ್.ಎಲ್.ಬಿ., ಪಿಜಿಡಿಎಂ**
**ವಕೀಲರು KAR-70/98**

## IN THE COURT OF THE HON'BLE 3RD ACJ & JMFC (Senior Division) AT DAVANAGERE

O. S. NO. 110/2023

Plaintiffs : Smt. Manjamma V/s Defendants:- Smt. Chandramma & Others

**COURT NOTICE TO Defendant No.2 Smt. KUSUMA W/O Late SHANUMUKAPPA,** Aged About 50 Yrs, R/o # 1827/28,3rd Main, 1st Cross. Behind Nutan College, LIC Colony, Davangere.Mobile No.9632043076.

**Defendant No.3 Sri. CHETAN S/O Late SHANUMUKAPPA,** Aged About 30 Yrs, R/o # 1827/28,3rd Main, 1st Cross. Behind Nutana College, LIC Colony, Davangere. Mobile No.9964131612.

**Defendant No.4 Smt.PRIYA W/O NANDEESHA G.B** Aged About 28 Yrs, R/o Nandeesha G.B S/o HalliGowdru Mahadevappa ,Davangere - Jagalur Main Road, Near Society, Ele Bethuru ,Davangere. Mobile No.8971531757.

Whereas the above named plaintiff has filed above mentioned suit against the above the Defendant's No. 2 to 4 relating to schedule property.

Therefore, the **Defendant's No. 2, 3 and 4** is hereby summoned to appear in person or by pleader duly instructed before above mentioned court on 03.01.2024 at 11.00 a.m Clock in the forenoon, failing which, the matter will heard and disposed off in your absence.

Given under my hand and the seal of the court, this 01st Day of December 2023.

**SCHEDULE**

**1) Item No.1 i.e.,** Agricultural land bearing Sy. No. 52/4, measuring 3-00 Acre and 13 Gunta of Kabbur Village in Mayakonda Hobali in Davangere Taluk, within the jurisdiction of this Hon'ble Court and this Hon'ble court having jurisdiction to try this suit.

**EAST:** Agriculture Land of Kooshappara Jayappa. **WEST:** Agriculture Land of Sangappara Umapathi. **NORTH:**Agriculture Land of Manjunath S/o Ramachandrappa. **SOUTH:** Agriculture Land of Sadashivappa S/o Ramappa.

**2). Item No.2 i.e.,** Agricultural land bearing Sy. No. 52/6, measuring 3-00 Acre 25 Gunta, of Kabbur Village Mayakonda Hobali in Davangere Taluk,and suit schedule property.

**EAST:** Agriculture Land of Ningamma D/o Ramappa. **WEST:** Agriculture Land of Kooshappara Jayappa. **NORTH:** Karabu, Halla. **SOUTH:** Agriculture Land of Paramashivappa S/o Ramappa.

**3). Item No.3 i.e.,** Agricultural land bearing Sy. No. 52/7, measuring 1-00 Acre 31 Gunta, of Kabbur Village Mayakonda Hobali in Davangere Taluk,and suit schedule property. 4). Item No.4 i.e., Agricultural land bearing Sy. No. 86/2, measuring 24 Guntas, of Ramagoundanahalli Village Mayakonda Hobali in Davangere Taluk,and suit schedule property.

**EAST:** Agriculture Land of Sadashivanna. **WEST:** Agriculture Land of Shivanna. **NORTH:** Agriculture Land of CMT Manjanna S/o CMT Shekarappa. **SOUTH:** Agriculture Land of Shivanna.

Given under my hand and the seal of the court, this 01st Day of December 2023.

*Advocate for Plaintiff*
*Sd/-* **Sri M.K. Prasthanth Patil,**
Advocate, Davangere.

*By order of the Court*
*Sd/-* **Chief Ministerial Officer**
Senior Civil Judge at Davangere

# ಗುಣಮಟ್ಟದ ಶಿಕ್ಷಣದ ಮೂಲಕ ಉನ್ನತ ಹುದ್ದೆಗಳನ್ನು ಪಡೆಯಲಿ



**ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ 60ನೇ ವರ್ಷದ ಸಂಭ್ರಮಾಚರಣೆಯಲ್ಲಿ ದಾವಣಗೆರೆ ವಿವಿ ಕುಲಪತಿ ಪ್ರೊ.ಬಿ.ಡಿ. ಕುಂಬಾರ್ ಆಶಯ**

ದಾವಣಗೆರೆ, ಡಿ. 1- ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯು ನೂರಾರು ವರ್ಷ ಮುಂದುವರೆಯುವ ಮೂಲಕ ಇನ್ನೂ ನೂರಾರು ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವಂತಾಗಲಿ. ವಿದ್ಯಾರ್ಥಿಗಳು ಇಂತಹ ವಿದ್ಯಾಸಂಸ್ಥೆಯಲ್ಲಿ ಗುಣಮಟ್ಟದ ಶಿಕ್ಷಣ ಪಡೆದು ಉನ್ನತ ಹುದ್ದೆಗಳನ್ನು ಅಲಂಕರಿಸುವಂತಾಗಲಿ ಎಂದು ದಾವಣಗೆರೆ ವಿವಿ ಕುಲಪತಿ ಪ್ರೊ.ಬಿ.ಡಿ. ಕುಂಬಾರ್ ಆಶಿಸಿದರು.

ಸ್ಥಳೀಯ ವಿನೋಬನಗರ ಒಂದನೇ ಮುಖ್ಯರಸ್ತೆಯಲ್ಲಿನ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯ ಆವರಣದ ಶ್ರೀಮತಿ ಸುರೇಖ ವೀರಣ್ಣ ಚಿಗಟೇರಿ ಕಲಾ ಮಂದಿರದಲ್ಲಿ ಇಂದು ಏರ್ಪಾಡಾಗಿದ್ದ ಸಂಸ್ಥೆಯ 60 ನೇ ವರ್ಷದ ಸಂಭ್ರಮಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಳೆದ ಅರವತ್ತು ವರ್ಷಗಳಿಂದ ಈ ವಿದ್ಯಾಸಂಸ್ಥೆಯು ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ, ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆ ಸೇರಿದಂತೆ ಒಟ್ಟು 8 ಶಾಲೆಗಳನ್ನು ನಡೆಸಿಕೊಂಡು ಬರುತ್ತಿದೆ. ಶಿಕ್ಷಕರಿಗೆ ಸಂಬಳ ಕೊಡುವುದು ಕಷ್ಟಕರವಾದ ಇಂತಹ ಸಂದರ್ಭದಲ್ಲಿ ಒಂದು ಶಿಕ್ಷಣ ಸಂಸ್ಥೆ ಆರು ದಶಕಗಳಿಂದ ಶಾಲೆಗಳನ್ನು ನಡೆಸುತ್ತಾ ಬಂದಿರುವುದು ಶ್ಲಾಘನೀಯ ಎಂದರು.

ಈ ಶಾಲೆಗಳಲ್ಲಿ ಓದಿದ ಬಹಳಷ್ಟು ವಿದ್ಯಾರ್ಥಿಗಳು ಐಎಎಸ್, ಐಪಿಎಸ್, ವೈದ್ಯರು, ಇಂಜಿನಿಯರ್, ಶಿಕ್ಷಕರು, ಸ್ವಯಂ ಉದ್ಯೋಗಿಗಳಾಗಿ ಹೊರಹೊಮ್ಮಿದ್ದಾರೆ ಎಂದು ಹೇಳಿದರು.

ಇಂತಹ ಹಳೆಯ ವಿದ್ಯಾರ್ಥಿಗಳನ್ನು ಕರೆಸಿ ಅವರಿಂದ ಮಾರ್ಗದರ್ಶನ ಕೊಡಿಸುವ ಅಗತ್ಯವಿದೆ. ವಿದ್ಯಾರ್ಥಿಗಳಿಗೂ ಸ್ಫೂರ್ತಿ ನೀಡಿದಂತಾಗುತ್ತದೆ. ಮಕ್ಕಳಿಗೆ ಒತ್ತಡ ಹಾಕುವುದು ಸರಿಯಲ್ಲ. ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿ ಇದ್ದರೆ ಪ್ರೋತ್ಸಾಹಿಸಿ, ಓದಿಗೂ ಪ್ರೇರಣೆ ನೀಡಿ ಎಂದು ಕರೆ ನೀಡಿದರು.

ಬಾಪೂಜಿ ವಿದ್ಯಾಸಂಸ್ಥೆ ಶೈಕ್ಷಣಿಕ ನಿರ್ದೇಶಕ ಡಾ.ಎಂ.ಜಿ. ಈಶ್ವರಪ್ಪ ಮಾತನಾಡಿ, ಈ ಹಿಂದೆ ದಾವಣಗೆರೆ ನಗರ ಮ್ಯಾಂಚೆಸ್ಟರ್ ಎಂದು ಖ್ಯಾತಿ ಗಳಿಸಿತ್ತು. ಹೆಚ್ಚಾಗಿ ಹತ್ತಿ ಬೆಳೆಯುವುದರಿಂದ ಹತ್ತಿ ಗಿರಣಿಗಳು ಸಹ ಹೆಚ್ಚಿದ್ದವು. ಕಾರ್ಮಿಕರ ಸಂಖ್ಯೆ ಸಹ ಹೆಚ್ಚಾಗಿತ್ತು. ಆದರೀಗ ಶಿಕ್ಷಣ ನಗರಿಯಾಗಿ ಮುಂದಡಿಯಿಟ್ಟಿದೆ. ಶಾಲಾ-ಕಾಲೇಜುಗಳು ಕೂಡ ತುಂಬಿ ತುಳುಕುತ್ತಿವೆ ಎಂದು ಹೇಳಿದರು.

ದಾವಣಗೆರೆ ದಾನಿಗಳ ತವರು. ಎಲ್ಲಿ ನೋಡಿದರೂ ಚಿಗಟೇರಿ ಮನೆತನದ ಆಸ್ಪತ್ರೆ, ಡಿಆರ್‌ಎಂ, ಜೆಜೆಎಂ ವೈದ್ಯಕೀಯ, ಯುಬಿಡಿಟಿ ಕಾಲೇಜು, ಡಿಆರ್‌ಆರ್ ಶಾಲೆಗಳನ್ನು ನೋಡಬಹುದು. ಇನ್ನೂ ಇತರೆ ದಾನಿಗಳ ಹೆಸರಿನಲ್ಲಿ ಅನೇಕ ಶಾಲಾ-ಕಾಲೇಜುಗಳು ನಡೆಯುತ್ತಿವೆ. ಹಿಂದೆ ದಾನಶೂರರು ತಮ್ಮ ವ್ಯಾಪಾರೋದ್ಯಮವನ್ನು ಬೆಳೆಸುವ ಮೂಲಕ ಶಿಕ್ಷಣಕ್ಕೂ ಆದ್ಯತೆ ನೀಡಿ ಬೆಳೆಸಿದರು ಎಂದು ತಿಳಿಸಿದರು.

ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ ಗೌರವಾಧ್ಯಕ್ಷ ವೀರಣ್ಣ ವಿ. ಚಿಗಟೇರಿ ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರು ಗುಡ್‌ಶೆಫರ್ಡ್ ಶಾಲೆ ಅಧ್ಯಕ್ಷ ಜೇಕಬ್ ಥಾಮಸ್, ಮಹಾನಗರ ಪಾಲಿಕೆ ಸದಸ್ಯ ಎ. ನಾಗರಾಜ್, ನಿಕಟ ಪೂರ್ವ ಸಹ ಕಾರ್ಯದರ್ಶಿ ಎಂ.ಕೆ. ಬಕ್ಕಪ್ಪ, ಸಂಸ್ಥೆ ಅಧ್ಯಕ್ಷ ಮುರುಘೇಂದ್ರ ವಿ. ಚಿಗಟೇರಿ, ಕಾರ್ಯದರ್ಶಿ ಮನೋಹರ ಎಸ್.ಚಿಗಟೇರಿ, ಸಹ ಕಾರ್ಯದರ್ಶಿ ಸೌಮ್ಯ ಬಸವರಾಜ್, ಮುಖ್ಯೋಪಾಧ್ಯಾಯರಾದ ಸುರೇಶ್ ನಾಯ್ಕ, ಎಸ್. ನಾಗರಾಜ್, ಹೆಚ್. ನಿಂಗಪ್ಪ, ಚಿಗಟೇರಿ ಮನೆತನದವರು, ಮೂಡಿ ಕುಬಸದ ಮನೆತನದವರು, ಶಾಲೆಯ ಹಿರಿಯ ವಿದ್ಯಾರ್ಥಿಗಳು, ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

# ಗಂಗಾ ಕಲ್ಯಾಣದಿಂದ ರೈತರ ಆದಾಯ ಹೆಚ್ಚಳ ಖಾಸಗಿ ಶಾಲೆ ಸೇರ್ಪಡೆಯಲ್ಲೂ ಏರಿಕೆ

## ಜಯಣ್ಣ ಚಿಗಟೇರಿ ಪ್ರಶಸ್ತಿ ಸ್ವೀಕಾರ ಕಾರ್ಯಕ್ರಮದಲ್ಲಿ ಉಪನ್ಯಾಸಕ ಹೆಚ್. ಗೋಪಿ





ದಾವಣಗೆರೆ, ಡಿ. 1 – ಗಂಗಾ ಕಲ್ಯಾಣ ಯೋಜನೆ ಮೂಲಕ ರೈತರಿಗೆ ಸಬ್ಸಿಡಿ ದರದಲ್ಲಿ ಕೊಳವೆ ಬಾವಿ ಸೌಲಭ್ಯ ಒದಗಿಸುತ್ತಿರುವುದು ಉತ್ಪಾದಕತೆ ಹಾಗೂ ಬಡತನ ನಿವಾರಣೆಗೆ ನೆರವಾಗುತ್ತಿದೆ. ಈ ಯೋಜನೆಯನ್ನು ಇನ್ನಷ್ಟು ವಿಸ್ತರಿಸಬೇಕಿದೆ ಎಂದು ಉಡುಪಿಯ ಪೂರ್ಣಚಂದ್ರ ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕ ಹೆಚ್. ಗೋಪಿ ತಿಳಿಸಿದ್ದಾರೆ.

ದಾವಣಗೆರೆ ವಿಶ್ವವಿದ್ಯಾಲಯ ಹಾಗೂ ಜಯರತ್ನ ಕಲ್ಯಾಣ ಕೇಂದ್ರ ಟ್ರಸ್ಟ್‌ಗಳ ಸಂಯುಕ್ತಾಶ್ರಯದಲ್ಲಿ ನಗರದ ಬಾಪೂಜಿ ಎಂ.ಬಿ.ಎ. ಕಾಲೇಜಿನ ಸಭಾಂಗಣದಲ್ಲಿ ಇಂದು ಆಯೋಜಿಸಲಾಗಿದ್ದ ದತ್ತಿ ಕಾರ್ಯಕ್ರಮದ ವೇಳೆ ಜಯಣ್ಣ ಚಿಗಟೇರಿ ಮಾನವಿಕ ಅಧ್ಯಯನದ ಪಿ.ಹೆಚ್.ಡಿ. ಅತ್ಯುತ್ತಮ ಸಂಶೋಧನಾ ಮಹಾಪ್ರಬಂಧಕ್ಕೆ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

ಗಂಗಾ ಕಲ್ಯಾಣ ಯೋಜನೆಯ ಪರಿಣಾಮಗಳ ಕುರಿತು ತಾವು ಅಧ್ಯಯನ ನಡೆಸಿದ ಬಗ್ಗೆ ವಿವರ ನೀಡಿದ ಗೋಪಿ, ಕಲಬುರಗಿ, ಬೆಳಗಾವಿ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ಈ ಯೋಜನೆಯ ಅತಿ ಹೆಚ್ಚು ಫಲಾನುಭವಿಗಳಿದ್ದಾರೆ. ಈ ಜಿಲ್ಲೆಗಳಲ್ಲಿ ಯೋಜನೆಯ ಪರಿಣಾಮಗಳ ಅಧ್ಯಯನ ನಡೆಸಿದ್ದಾಗಿ ಹೇಳಿದರು.

ಈ ಯೋಜನೆಯ ಫಲಾನುಭವಿ ಕುಟುಂಬಗಳಲ್ಲಿ ಶಿಕ್ಷಣ, ಕೃಷಿ ಚಟುವಟಿಕೆ ಹಾಗೂ ಬಂಡವಾಳ ಆಸ್ತಿಗಳಲ್ಲಿ ಸುಧಾರಣೆ ಕಂಡು ಬಂದಿದೆ. ರೈತರು ವಾಣಿಜ್ಯ ಬೆಳೆಗಳಿಗೆ ಪರಿವರ್ತನೆಯಾಗಿ ಹೆಚ್ಚು ಲಾಭ ಗಳಿಸುತ್ತಿದ್ದಾರೆ ಎಂದು ಹೇಳಿದರು.

ಈ ಯೋಜನೆಯ ಫಲಾನುಭವಿಗಳ ಮಕ್ಕಳು ಸರ್ಕಾರಿ ಶಾಲೆಗಳ ಬದಲು ಖಾಸಗಿ ಶಾಲೆಗಳಿಗೆ ಹೋಗುವ ಪ್ರಮಾಣ ಹೆಚ್ಚಾಗಿದೆ. ಯೋಜನೆಗೆ ಮೊದಲು ಫಲಾನುಭವಿಗಳ ಕುಟುಂಬದ ಶೇ.91.8ರಷ್ಟು ಮಕ್ಕಳು ಸರ್ಕಾರಿ ಶಾಲೆಗೆ ತೆರಳುತ್ತಿದ್ದರು. ನಂತರದಲ್ಲಿ ಈ ಪ್ರಮಾಣ ಶೇ.72.6ಕ್ಕೆ ಇಳಿಕೆಯಾಗಿದೆ. ಖಾಸಗಿ ಶಾಲೆಗಳಿಗೆ ಹೋಗುವವರ ಪ್ರಮಾಣ ಶೇ.8.2ರಿಂದ ಶೇ.27.4ಕ್ಕೆ ಹೆಚ್ಚಾಗಿದೆ ಎಂದವರು ಹೇಳಿದರು.

ಯೋಜನೆ ಫಲಾನುಭವಿಗಳು ಕೃಷಿ ಹೊಂಡ, ತುಂತುರು ನೀರಾವರಿ ಹಾಗೂ ಹನಿ ನೀರಾವರಿಯಂತಹ ಸೌಲಭ್ಯಗಳನ್ನು ಪಡೆಯುವುದು ಹೆಚ್ಚಾಗಿದೆ ಎಂದೂ ಗೋಪಿ ತಿಳಿಸಿದರು.

ಆದರೆ, ಸಣ್ಣ ಹಾಗೂ ಅತಿ ಸಣ್ಣ ರೈತರ ಪೈಕಿ ಶೇ.5ರಷ್ಟು ಜನರಿಗೆ ಮಾತ್ರ ಈ ಯೋಜನೆಯ ಲಾಭ ತಲುಪಿದೆ. ಈ ಯೋಜನೆಯನ್ನು ಮತ್ತಷ್ಟು ವಿಸ್ತರಿಸಬೇಕು. ಅಲ್ಲದೇ, ಕೆರೆಗಳಿಗೆ ನೀರು ತುಂಬಿಸುವ ಯೋಜನೆಗಳ ಮೂಲಕ ಅಂತರ್ಜಲ ಮಟ್ಟ ಹೆಚ್ಚಿಸಬೇಕು. ಆಗ ಮಾತ್ರ ಹೆಚ್ಚು ಕೊಳವೆ ಬಾವಿಗಳ ಸೌಲಭ್ಯ ಪರಿಣಾಮಕಾರಿಯಾಗಿ ಕಲ್ಪಿಸಲು ಸಾಧ್ಯ ಎಂದು ಗೋಪಿ ಹೇಳಿದರು.

# ಕನ್ಯಕಾ ಪರಮೇಶ್ವರಿ ದೇವಸ್ಥಾನ ಸಂಘದಿಂದ ಸನ್ಮಾನ



ದಾವಣಗೆರೆ, ಡಿ.1- ಜಿಲ್ಲಾಡಳಿತ ಮತ್ತು ಮಹಾನಗರ ಪಾಲಿಕೆ ವತಿಯಿಂದ ಕಳೆದ ವಾರ ನಡೆದ ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗೆ ಕೊಡ ಮಾಡುವ ರಾಜ್ಯೋತ್ಸವದ ಗೌರವ ಪುರಸ್ಕಾರಕ್ಕೆ ಭಾಜನರಾಗಿರುವ ಪತ್ರಕರ್ತರು ಮತ್ತು ಪತ್ರಿಕಾ ವಿತರಕರನ್ನು ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನ ಸಂಘದಿಂದ ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನದಲ್ಲಿ ಇಂದು ಸನ್ಮಾನಿಸಿ, ಗೌರವಿಸಲಾಯಿತು.

ಹಿರಿಯ ಪತ್ರಕರ್ತರೂ ಆದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಖಜಾಂಚಿ ಎನ್.ವಿ. ಬದರಿನಾಥ್, ಹಿರಿಯ ಪತ್ರಿಕಾ ವಿತರಕರಾದ ಟಿ.ಕೆ. ದಿನೇಶ್ ಬಾಬು, ಪಿ. ಪ್ರಕಾಶ್ ಅವರುಗಳನ್ನು ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನ ಸಂಘದ ಅಧ್ಯಕ್ಷ ಆರ್.ಎಲ್. ಪ್ರಭಾಕರ್ ಅವರು ಶಾಲು ಹೊದಿಸಿ ಸನ್ಮಾನಿಸಿದರು.

ದೇವಸ್ಥಾನದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಯುವಜನ ಸಂಘದ ಅಧ್ಯಕ್ಷರು ಪದಾಧಿಕಾರಿಗಳು, ಹಿರಿಯ ಪತ್ರಿಕಾ ವಿತರಕರಾದ ಬಂಕಾಪುರ ರುದ್ರೇಶ್, ಪತ್ರಿಕಾ ಜಾಹೀರಾತು ಪ್ರತಿನಿಧಿ ಬಿ.ಎನ್. ಸಾಯಿಪ್ರಸಾದ್, ಪತ್ರಿಕಾ ವಿತರಕರ ಒಕ್ಕೂಟದ ಗೌರವ ಸಲಹೆಗಾರ ಎ.ಎನ್. ಕೃಷ್ಣಮೂರ್ತಿ, ಪತ್ರಿಕಾ ವಿತರಕ ಮಿತ್ರರಾದ ಪಿ. ರಾಮಚಂದ್ರ ಶೆಟ್ಟಿ, ಡಿ. ರವಿ, ಈ.ಮಂಜುನಾಥ್, ಗುರುರಾಜ್, ಬಿ.ಎಸ್. ರಮೇಶ್ ಬಾಬು, ಅಖಿಲ್, ಶರತ್ ಇತರರು ಉಪಸ್ಥಿತರಿದ್ದರು.

## ನಾಗರಿಕ ಬಂದೂಕು ತರಬೇತಿ ಶಿಬಿರ

ದಾವಣಗೆರೆ, ಡಿ.1- ಜಿಲ್ಲಾ ಸಶಸ್ತ್ರ ಮೀಸಲು ಪೊಲೀಸ್ ಪಡೆಯ ಕವಾಯತು ಮೈದಾನದಲ್ಲಿ ಇದೇ ದಿನಾಂಕ 5ರಿಂದ ನಾಗರಿಕ ಬಂದೂಕು ತರಬೇತಿ ಶಿಬಿರವನ್ನು ಜಿಲ್ಲಾ ಪೊಲೀಸ್ ಇಲಾಖೆ ಹಮ್ಮಿಕೊಂಡಿದೆ. ಆಸಕ್ತ ನಾಗರಿಕರು ಇದೇ ದಿನಾಂಕ 4ರೊಳಗೆ ಹತ್ತಿರದ ಪೊಲೀಸ್ ಠಾಣೆಗಳಲ್ಲಿ ಅರ್ಜಿಗಳನ್ನು ಪೊಲೀಸ್ ಉಪಾಧೀಕ್ಷಕರು, ಜಿಲ್ಲಾ ಸಶಸ್ತ್ರ ಮೀಸಲು ಪಡೆ, ಪಿ.ಜೆ. ಬಡಾವಣೆ ಇಲ್ಲಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 08192272005.


9ನೇ ವರ್ಷಕ್ಕೆ ಪಾದಾರ್ಪಣೆ

ಮೋಟೋ ಸರ್ವೀಸ್ ಝೋನ್ Moto Service Zone

ವಿನಾಯಕ ನಗರ, ರಿಂಗ್ ರಸ್ತೆ, ಸಂಗೊಳ್ಳಿ ರಾಯಣ್ಣ ಪ್ರತಿಮೆಯ ಹತ್ತಿರ, ದಾವಣಗೆರೆ.

(ಹೋಂಡಾ ಮತ್ತು ಹೀರೋ ವಾಹನಗಳ ಸರ್ವೀಸ್ ಸೆಂಟರ್)

ನಮ್ಮ ಸಂಸ್ಥೆ ಎಂಟು ವರ್ಷಗಳನ್ನು ಪೂರೈಸಿ, ಇಂದಿಗೆ ಯಶಸ್ವೀ ಒಂಭತ್ತನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ್ದು, ಸಹಕರಿಸಿ, ಪ್ರೋತ್ಸಾಹಿಸಿದ ಎಲ್ಲಾ ಗ್ರಾಹಕರಿಗೂ, ಸ್ನೇಹಿತರಿಗೂ, ಹಿತೈಷಿಗಳಿಗೂ, ಪ್ರತ್ಯಕ್ಷ-ಪರೋಕ್ಷವಾಗಿ ಸಹಕರಿಸಿದ ಸರ್ವರಿಗೂ ನಮ್ಮ ಹೃದಯ ತುಂಬಿದ ಕೃತಜ್ಞತೆಗಳು.



ಬಿ. ಗಿರೀಶ್ 9686336044



ಗಣೇಶ್ 9964613441


## ರಾಷ್ಟ್ರಮಟ್ಟದ ಪವರ್‌ಲಿಫ್ಟಿಂಗ್ : ಶ್ವೇತಾಗೆ ದ್ವಿತೀಯ



ದಾವಣಗೆರೆ, ಡಿ. 1- ಈಚೆಗೆ ನಡೆದ ರಾಷ್ಟ್ರಮಟ್ಟದ ಪವರ್ ಲಿಫ್ಟಿಂಗ್ ಚಾಂಪಿಯನ್ ಶಿಪ್ ಸ್ಪರ್ಧೆಯಲ್ಲಿ ದೊಡ್ಡಬಾತಿಯ ಎನ್. ಶ್ವೇತಾ 107 ಕೆ.ಜಿ. ಭಾರತ ಎತ್ತುವ ಮೂಲಕ ದ್ವಿತೀಯ ಸ್ಥಾನ ಪಡೆದಿದ್ದಾರೆ.

ಶ್ವೇತಾ, ದೊಡ್ಡಬಾತಿಯ ನಿಂಗಪ್ಪ ಮಂಗಳಮ್ಮ ದಂಪತಿಯ ಪುತ್ರಿಯಾಗಿದ್ದು, ಅಮೃತ ವಿದ್ಯಾಲಯದ ವಿದ್ಯಾರ್ಥಿನಿ.

## ಲಾನ್ ಟೆನ್ನಿಸ್: ಅಭಿಷೇಕ್ ರಾಷ್ಟ್ರಮಟ್ಟಕ್ಕೆ



ದಾವಣಗೆರೆ, ಡಿ.1- 14 ಮತ್ತು 17 ವರ್ಷ ವಯೋಮಿತಿಯ ಬಾಲಕರ ರಾಜ್ಯ ಮಟ್ಟದ ಲಾನ್ ಟೆನ್ನಿಸ್ ಪಂದ್ಯಾವಳಿಯಲ್ಲಿ ನಗರದ ಸಿದ್ಧಗಂಗಾ ಶಾಲೆಯ 9ನೇ ತರಗತಿ ಅಭಿಷೇಕ್ ಎಂ. ಕಲ್ಲೇದೇವರ ಪ್ರಥಮ ಸ್ಥಾನ ಗಳಿಸಿ ರಾಷ್ಟ್ರಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾನೆ. ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಆಯೋಜಿಸಲ್ಪಟ್ಟ ರಾಜ್ಯ ಮಟ್ಟದ ಪಂದ್ಯಾವಳಿಯಲ್ಲಿ ರಾಷ್ಟ್ರಮಟ್ಟದ ಸ್ಪರ್ಧೆಗೆ ಅರ್ಹತೆ ಗಳಿಸಿರುವ ಅಭಿಷೇಕ್ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ (ಫಿಂಗರ್ ಪ್ರಿಂಟ್) ಮಂಜುನಾಥ್ ಕಲ್ಲೇದೇವರ ಮತ್ತು ಸವಿತಾ ದಂಪತಿ ಪುತ್ರ.


॥ ಶ್ರೀ ಗುರು ಮುರುಘೇಶಾಯ ನಮಃ ॥

60ರ ಸಂಭ್ರಮ – ಶುಭಾಶಯಗಳು

ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ (ರಿ)
ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆ
ಮತ್ತು
ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ,
ನರಸರಾಜ ರಸ್ತೆ, ದಾವಣಗೆರೆ

ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯು 1962ರಲ್ಲಿ ಚಿತ್ರದುರ್ಗ ಬೃಹನ್ಮಠದ ಶ್ರೀ ಮನ್ಮಹಾರಾಜ ನಿರಂಜನ ಮಲ್ಲಿಕಾರ್ಜುನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಕೃಪಾಶೀರ್ವಾದದಿಂದ ಅಂದಿನ ಗಣ್ಯರಾದ ಶ್ರೀ ವೀರಭದ್ರಪ್ಪ ಎಂ. ಚಿಗಟೇರಿ ಅವರ ಸಾರಥ್ಯದಲ್ಲಿ ಪ್ರಾರಂಭವಾಗಿ, ವಿಶೇಷವಾಗಿ ದಾವಣಗೆರೆಯ ಹಳೆಯ ನಗರದಲ್ಲಿ ಬಾಲಕಿಯರಿಗೆ ಶಿಕ್ಷಣ ಕೊಡಿಸುವ ಉದ್ದೇಶದಿಂದ **ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ**ಯನ್ನು ಪ್ರಾರಂಭಿಸಲಾಯಿತು. ಬಾಲಕಿಯರ ಶಿಕ್ಷಣಕ್ಕೆಂದೇ ಅಂದಿನ ಗಣ್ಯ ವ್ಯಾಪಾರಿಗಳಾದ **ಹಂಜಗಿ ಮಠದ ವೇ. ಶ್ರೀ ಪ್ರಭಪ್ಪಯ್ಯ**ನವರು ತಮ್ಮ ಸ್ವಂತ ಭೂಮಿಯನ್ನು ಮಾರಾಟ ಮಾಡಿ, ಆ ಹಣವನ್ನು ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯ ಕಟ್ಟಡದ ನಿರ್ಮಾಣಕ್ಕಾಗಿ 1961ರಲ್ಲಿ ನೀಡಿದ **ಮೊದಲ ದಾನಿಗಳಾಗಿ ಅಕ್ಕಮಹಾದೇವಿ ಶಾಲೆಯ ಬುನಾದಿಗೆ ಕಾರಣಕರ್ತರಾಗಿದ್ದಾರೆ** ಎಂದು ಹೆಮ್ಮೆಯಿಂದ ಹೇಳಲು ಹರ್ಷಿಸುತ್ತೇವೆ.

ಶಾಲೆಯು **60ರ ಸಂಭ್ರಮ**ವನ್ನು ಕಾಣುತ್ತಿರುವುದನ್ನು ಕಂಡು ನಮಗೆಲ್ಲರಿಗೂ ಬಹಳ ಹರ್ಷವಾಗಿದೆ. ಸಂಸ್ಥೆಯನ್ನು ಉನ್ನತ ಮಟ್ಟಕ್ಕೇರಿಸಿ ನಡೆಸಿಕೊಂಡು ಬರುತ್ತಿರುವ ಗೌರವಾಧ್ಯಕ್ಷರಾದ ಶ್ರೀ ಚಿಗಟೇರಿ ವೀರಣ್ಣನವರಿಗೂ ಹಾಗೂ ಆಡಳಿತ ಮಂಡಳಿಯವರಿಗೂ ನಮ್ಮ ಅಭಿನಂದನೆಗಳು. ಸಂಸ್ಥೆಯು ಹೀಗೆ ವಜ್ರ ಮಹೋತ್ಸವವನ್ನು ಹಾಗೂ ಶತಮಾನೋತ್ಸವವನ್ನು ಸಹ ಆಚರಿಸಲೆಂದು ಆಶಿಸುತ್ತೇವೆ.

ಶುಭ ಹಾರೈಸುವವರು : ಹಂಜಗಿಮಠದ ವೇ. ಶ್ರೀ ಪ್ರಭಪ್ಪಯ್ಯನವರ
ಮಗಳು : ಶ್ರೀಮತಿ ವಿಜಯಾ ಹಿರೇಮಠ (ವೀರಮ್ಮ) (ಶಾಲೆಯ ಹಳೆಯ ವಿದ್ಯಾರ್ಥಿನಿ)
ಅಳಿಯ : ಶ್ರೀ ಬಾಳಯ್ಯ ಹಿರೇಮಠ ಮತ್ತು ಮೊಮ್ಮಕ್ಕಳು (ಶಾಲೆಯ ಹಳೆಯ ವಿದ್ಯಾರ್ಥಿಗಳು)
ಹಾಗೂ ಮರಿ ಮೊಮ್ಮಕ್ಕಳು, ದಾವಣಗೆರೆ.



ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ : 24.11.2023ರಂದು ನಿಧನರಾದ
ಶ್ರೀ ವಿನಾಯಕ ಸ್ಟೀಲ್ಸ್,
ಶ್ರೀ ವಿನಾಯಕ ಅಸೋಸಿಯೇಟ್ಸ್ ಮಾಲೀಕರೂ,
ಹಿರಿಯರು, ಮಾರ್ಗದರ್ಶಕರೂ ಆಗಿದ್ದ
ಶ್ರೀ ತಿಪ್ಪೇಶ್ ಬೇತೂರು
ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ,
ಅವರ ಅಗಲಿಕೆಯ ದುಃಖ ಭರಿಸುವ
ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ
ಎಂದು ಪ್ರಾರ್ಥಿಸುತ್ತೇವೆ.


• ಅಭಿಷೇಕ್ ಬೇತೂರು • ಜಯವಿಭವ (ಸಂಜು) • ರಂಜಿತ್ ಕಂಬ್ಳಿ
• ಷಣ್ಮುಖ ಕರೂರು • ಲಿಂಗೇಶ್ ಗೌಡ • ಪ್ರಶಾಂತ್ ಟಿ.ವಿ.
• ರಕ್ಷ • ಬಸವ ಪ್ರಸಾದ್ • ರವಿ ಭುವನೇಶ್ವರಿ



॥ ಶ್ರೀ ಗುರು ತಿಪ್ಪೇರುದ್ರಸ್ವಾಮಿ ಪ್ರಸನ್ನ ॥ ॥ ಶ್ರೀ ದಿಗ್ಗಿ ಸಂಗಮೇಶ್ವರ ಪ್ರಸನ್ನ ॥

ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

ದಾವಣಗೆರೆ ಸಿಟಿ ದೇವರಾಜ ಅರಸು ಬಡಾವಣೆ ವಾಸಿಗಳಾದ
ಶ್ರೀಮತಿ ಮಂಜುಳ ಬಿ. ತಿಪ್ಪೇಶ್ ಮಾಡುವ ವಿಜ್ಞಾಪನೆಗಳು.



ಎಮ್ಮವರಿಗೆ ಸಾವಿಲ್ಲ, ಎಮ್ಮವರು ಸಾವನರಿಯರು, ಸಾವೆಂಬುದು ಸ್ವಯವಲ್ಲ,
ಲಿಂಗದಿಂದುದಯಿಸಿ ಬಂದ ಲಿಂಗೈಕ್ಯಂಗೆ ಆ ಲಿಂಗದಲ್ಲಿಯಲ್ಲದೇ ಬೇರೆ ಮತ್ತೊಂದೆಡೆಯುಂಟೆ ಕೂಡಲ ಸಂಗಮದೇವಾ

ದಿನಾಂಕ 24-11-2023ನೇ ಶುಕ್ರವಾರ ಬೆಳಿಗ್ಗೆ 05.19ಕ್ಕೆ ನನ್ನ ಪೂಜ್ಯ ಪತಿಯವರಾದ
ಶ್ರೀ ಬೇತೂರು ತಿಪ್ಪೇಶ್
ಮಾಲೀಕರು, ಶ್ರೀ ವಿನಾಯಕ ಸ್ಟೀಲ್ಸ್, ಶ್ರೀ ವಿನಾಯಕ ಅಸೋಸಿಯೇಟ್ಸ್
ಇವರು ದೈವಾಧೀನರಾದ ಪ್ರಯುಕ್ತ ಕೈಲಾಸ ಶಿವಗಣಾರಾಧನೆಯನ್ನು
ದಿನಾಂಕ 02-12-2023ನೇ ಶನಿವಾರ ಮಧ್ಯಾಹ್ನ 12 ಕ್ಕೆ ದಾವಣಗೆರೆ ದೇವರಾಜ ಅರಸು
ಬಡಾವಣೆ 'ಎ' ಬ್ಲಾಕ್, 6ನೇ ಕ್ರಾಸ್ (# 69) ನಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು
ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

-: ಇಂತಿ ದುಃಖತಪ್ತರು : -
ಶ್ರೀಮತಿ ಮಂಜುಳ ತಿಪ್ಪೇಶ್, ಸಹೋದರರು-ಸಹೋದರಿಯರು
ಬೇತೂರು ಹಾಗೂ ತಿಪ್ಪಣ್ಣನವರ ವಂಶಸ್ಥರು ಹಾಗೂ ಬಂಧು-ಮಿತ್ರರು.
ಮೊ. : 98448 04080, 98454 07979

ವಿ.ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಿ, ಮೃತರಿಗೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.